ಸಂಪುಟ : 11 ಸಂಚಿಕೆ: 44 ಪುಟ : 4+2 ಬೆಲೆ: 3.00 ಮಂಗಳವಾರ ಮಾರ್ಚ್ 17 2026 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYASAKSHI KANNADA DAILY ಕನ್ನಡ ದಿನಪತ್ರಿಕೆ




Volume : 11 Issue : 44 Pages : 4+2 Price : 3.00 Tuesday March 17 2026 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

### 101ನೇ ಜಯಂತ್ಯುತ್ಸವದಲ್ಲಿ ಸಚಿವರ ನಮನ – ಜನಸೇವೆಯ ಮೂಲಕ ಶಾಶ್ವತ ಸ್ಮರಣೆ

# ತತ್ವನಿಷ್ಠ ರಾಜಕಾರಣದ ಪ್ರತೀಕ ಕೆ.ಎಚ್. ಪಾಟೀಲ



■ವಿಜಯಸಾಕ್ಷಿ ಸುದ್ದಿ, ಗದಗ

ಸಹಕಾರಿ ಭೀಷ್ಮ, ಮಾಜಿ ಸಚಿವ ದಿ. ಕೆ.ಎಚ್. ಪಾಟೀಲರ 101ನೇ ಜಯಂತ್ಯುತ್ಸವವನ್ನು ಸೋಮವಾರ ನಗರದಲ್ಲಿ ಭಕ್ತಿಪೂರ್ವಕವಾಗಿ ಆಚರಿಸಲಾಯಿತು. ನಗರದ ಕಾಟನ್ ಸೇಲ್ ಸೊಸೈಟಿ ಆವರಣದಲ್ಲಿ ನಡೆದ ಕಾರ್ಯಕ್ರಮವನ್ನು ಇಂಧನ ಸಚಿವ ಕೆ.ಜೆ. ಜಾರ್ಜ್ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಕೆ.ಎಚ್. ಪಾಟೀಲರು ಅಧಿಕಾರಕ್ಕಾಗಿ ರಾಜಕಾರಣ ಮಾಡಿದವರಲ್ಲ, ಜನರ ಸಮಸ್ಯೆಗಳಿಗೆ ಸ್ಪಂದಿಸಿದ ತತ್ವನಿಷ್ಠ ನಾಯಕರು ಎಂದು ಹೇಳಿದರು. 1978ರಲ್ಲಿ ಕಾಂಗ್ರೆಸ್ ತೊರೆದಿದ್ದರೆ ಅವರು ಮುಖ್ಯಮಂತ್ರಿಯಾಗುವ ಅವಕಾಶವಿತ್ತು ಎಂಬುದನ್ನು ಸ್ಮರಿಸಿದರು.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಾತನಾಡಿ, ಉಚಿತ ವೈದ್ಯಕೀಯ ಸೇವೆಗಳ ಮೂಲಕ ಕೆ.ಎಚ್. ಪಾಟೀಲರ ಹೆಸರನ್ನು ಶಾಶ್ವತಗೊಳಿಸಲಾಗಿದೆ ಎಂದರು. ಅರಣ್ಯ ಸಚಿವ ಈಶ್ವರ ಖಂಡ್ರೆ, ಅವರ ಆಡಳಿತದಿಂದ ಕರ್ನಾಟಕ ಹಸಿರಾಗಲು ಕಾರಣವಾಗಿದೆ ಎಂದು ಹೇಳಿದರು.

> "ಕೆ.ಎಚ್. ಪಾಟೀಲ ಅಧಿಕಾರಕ್ಕಾಗಿ ರಾಜಕಾರಣ ಮಾಡಲಿಲ್ಲ; ಜನರ ಸಮಸ್ಯೆಗೆ ಸ್ಪಂದಿಸಿದ ನಾಯಕ"
> – ಕೆ.ಜೆ. ಜಾರ್ಜ್

**ವರ್ಷಪೂರ್ತಿ ಸೇವಾ ಯೋಜನೆಗಳಿಗೆ ಚಾಲನೆ**

1) ಕಾಟನ್ ಸೇಲ್ ಸೊಸೈಟಿ ಶತಮಾನೋತ್ಸವ ಕಟ್ಟಡ ಉದ್ಘಾಟನೆ
2) ರಾಜೇಶ್ವರಿ ವಿದ್ಯಾನಿಕೇತನದಲ್ಲಿ ಹೊಸ ವರ್ಗಗಳ ಸಂಕೀರ್ಣ ಆರಂಭ
3) 100 ಉಚಿತ ಕೀಲು ಬದಲಾವಣೆ ಶಸ್ತ್ರಚಿಕಿತ್ಸೆ
4) 12 ಉಚಿತ ಕಿಡ್ನಿ ಕಸಿ ಶಸ್ತ್ರಚಿಕಿತ್ಸೆ
5) ಹೆಣ್ಣು ಮಗುವಿನ ಹೆರಿಗೆಗೆ ಉಚಿತ ಸೇವೆ (ಒಂದು ವರ್ಷ)
6) 1000 ಮೋತಿಬಿಂದು ಶಸ್ತ್ರಚಿಕಿತ್ಸೆ ಯೋಜನೆ
7) ಜಿಲ್ಲಾ ಆಸ್ಪತ್ರೆಯಲ್ಲಿ ಬುತ್ತಿ ಆಲಯ (ಉಚಿತ ಊಟ ವ್ಯವಸ್ಥೆ)

ಕಾನೂನು ಮತ್ತು ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ, ತಂದೆಯವರ ರಾಜಕಾರಣ ರೈತರ ಪರವಾಗಿದ್ದು, ಸಮಾಜದ ಹಿತಕ್ಕಾಗಿ ಹೋರಾಡಿದವರು ಎಂದು ಹೇಳಿದರು. ರೈತರಿಗೆ ವಿಂಡ್ ಮತ್ತು ಸೋಲಾರ್ ಯೋಜನೆಗಳಲ್ಲಿ ಪಾಲುದಾರಿಕೆ ನೀಡಬೇಕು ಎಂಬ ಅಗತ್ಯವನ್ನೂ ಒತ್ತಿ ಹೇಳಿದರು.

ಕಾರ್ಯಕ್ರಮದಲ್ಲಿ ಡಾ. ಪ್ರಭಾಕರ ಕೋರೆ ಅವರಿಗೆ ಕೆ.ಎಚ್. ಪಾಟೀಲ ಪ್ರಶಸ್ತಿ ಪ್ರದಾನ ಮಾಡಲಾಯಿತು.



**100 ಮಂದಿಗೆ ಸನ್ಮಾನ**

ಜಯಂತ್ಯುತ್ಸವದ ಅಂಗವಾಗಿ ಕೆ.ಎಚ್. ಪಾಟೀಲರ ಒಡನಾಡಿಗಳಾದ 100ಕ್ಕೂ ಹೆಚ್ಚು ಹಿರಿಯ ನಾಗರಿಕರನ್ನು ಸನ್ಮಾನಿಸಲಾಯಿತು.

ಇದೇ ವೇಳೆ 100ಕ್ಕೂ ಹೆಚ್ಚು ಹಿರಿಯ ನಾಗರಿಕರನ್ನು ಸನ್ಮಾನಿಸಲಾಯಿತು.

ಇದೇ ಸಂದರ್ಭದಲ್ಲಿ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಲಾಯಿತು. ಕಾಟನ್ ಸೇಲ್ ಸೊಸೈಟಿ ನೂತನ ಕಟ್ಟಡ ಉದ್ಘಾಟನೆ, ಆಸ್ಪತ್ರೆಯಲ್ಲಿ ಉಚಿತ ಶಸ್ತ್ರಚಿಕಿತ್ಸೆಗಳ ಯೋಜನೆಗಳು ಹಾಗೂ ಜಿಲ್ಲಾ ಆಸ್ಪತ್ರೆಯಲ್ಲಿ ಬುತ್ತಿ ಆಲಯ ಉದ್ಘಾಟನೆ ನೆರವೇರಿತು.

ಕಾರ್ಯಕ್ರಮದಲ್ಲಿ ಹಲವಾರು ಜನಪ್ರತಿನಿಧಿಗಳು ಹಾಗೂ ಗಣ್ಯರು ಉಪಸ್ಥಿತರಿದ್ದರು.

### ಕೆ.ಎಚ್. ಪಾಟೀಲ ಪ್ರಶಸ್ತಿಯ 5 ಲಕ್ಷವನ್ನು 'ಬುತ್ತಿ ಆಲಯ' ಯೋಜನೆಗೆ ಸಮರ್ಪಣೆ!

# ಬಡವರ ಅನ್ನಕ್ಕಾಗಿ ಪ್ರಶಸ್ತಿ ಮೊತ್ತ ಸಮರ್ಪಿಸಿದ ಡಾ. ಕೋರೆ



■ವಿಜಯಸಾಕ್ಷಿ ಸುದ್ದಿ, ಗದಗ

ಶಿವಶಕ್ತಿ ಸಕ್ಕರೆ ಕಾರ್ಖಾನೆಯನ್ನು ಸಹಕಾರಿಗಳ ಸುಪರ್ದಿಗೆ ತರಲು ಪ್ರಮುಖ ಪಾತ್ರವಹಿಸಿದ ಕೆ.ಎಚ್. ಪಾಟೀಲರ ಹೆಸರಿನ ಪ್ರಶಸ್ತಿ ಸ್ವೀಕರಿಸುವುದು ಹೆಮ್ಮೆಯ ವಿಷಯ ಎಂದು ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷರು ಹಾಗೂ ಪದ್ಮಶ್ರೀ ಪುರಸ್ಕೃತ ಡಾ. ಪ್ರಭಾಕರ ಕೋರೆ ಹೇಳಿದರು.

ನಗರದ ಕಾಟನ್ ಸೇಲ್ ಸೊಸೈಟಿ ಆವರಣದಲ್ಲಿ ಸೋಮವಾರ ನಡೆದ ಕೆ.ಎಚ್. ಪಾಟೀಲರ 101ನೇ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅವರು, ಪ್ರಶಸ್ತಿಯ 5 ಲಕ್ಷ ಮೊತ್ತವನ್ನು ಬಡವರ ಹೊಟ್ಟೆ ತುಂಬಿಸುವ 'ಬುತ್ತಿ ಆಲಯ' ಯೋಜನೆಗೆ ನೀಡುತ್ತಿರುವುದಾಗಿ ಘೋಷಿಸಿದರು. ಕೆ.ಎಚ್. ಪಾಟೀಲರ ಜಯಂತಿಯ ಅಂಗವಾಗಿ ಗದಗ ಜಿಲ್ಲಾ ಆಸ್ಪತ್ರೆ ಆವರಣದಲ್ಲಿ ಆರಂಭಿಸಿರುವ ಬುತ್ತಿ ಆಲಯ ಯೋಜನೆ ಶ್ಲಾಘನೀಯವಾಗಿದ್ದು, ಅದು ನಿರಂತರವಾಗಿ ನಡೆಯಬೇಕು ಎಂದು ಅಭಿಪ್ರಾಯಪಟ್ಟರು. "ನನಗೆ ಪ್ರಶಸ್ತಿಯ ಆಶೀರ್ವಾದವೇ ಸಾಕು" ಎಂದು ಅವರು ಹೇಳಿದರು.

> "ಪ್ರಶಸ್ತಿಯ ಹಣಕ್ಕಿಂತ ಅದರ ಆಶೀರ್ವಾದವೇ ನನಗೆ ದೊಡ್ಡದು"
> – ಡಾ. ಪ್ರಭಾಕರ ಕೋರೆ

ಬೆಳಗಾವಿಯ ಶಿವಶಕ್ತಿ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಸರ್ಕಾರ ಆಡಳಿತಾಧಿಕಾರಿ ನೇಮಕ ಮಾಡಿದ ಸಂದರ್ಭವನ್ನು ನೆನೆದು, ಕೆ.ಎಚ್. ಪಾಟೀಲರ ಸಹಕಾರದಿಂದ ಮೂರು ತಿಂಗಳಲ್ಲಿ ಚುನಾವಣೆ ನಡೆದಿದ್ದು, ಇಂದು ಆ ಕಾರ್ಖಾನೆ ರಾಜ್ಯದಲ್ಲಿಯೇ ಅತಿ ಹೆಚ್ಚು ಕಬ್ಬು ನುರಿಸುವ ಕಾರ್ಖಾನೆಯಾಗಿದೆ ಎಂದು ತಿಳಿಸಿದರು.

ಮುಂದೆ ಸದಲಗಾ ಕ್ಷೇತ್ರದ ವಿಧಾನಸಭಾ ಟಿಕೆಟ್ ನೀಡಿದರೂ, ಚುನಾವಣೆಯಲ್ಲಿ ಸೋಲು ಕಂಡಿದ್ದೇನೆ. ಆದರೂ ಕೆ.ಎಚ್. ಪಾಟೀಲರು ನನ್ನ ಮೇಲೆ ಅಪಾರ ಪ್ರೀತಿ ಹೊಂದಿದ್ದರು ಎಂದು ಅವರು ಸ್ಮರಿಸಿದರು.

ಹುಬ್ಬಳ್ಳಿಯಲ್ಲಿ ಶೀಘ್ರದಲ್ಲೇ ಸಾವಿರ ಹಾಸಿಗೆಗಳ ಆಸ್ಪತ್ರೆ ಪ್ರಾರಂಭವಾಗಲಿದ್ದು, ಅಲ್ಲಿ ಕೂಡ ಬಡವರ ಹೊಟ್ಟೆ ತುಂಬಿಸುವ ಕಾರ್ಯ ಕೈಗೊಳ್ಳುವಂತೆ ಮನವಿ ಮಾಡಿದರು.

### ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಜಯಲಕ್ಷ್ಮಿ ಮಹಾಂತಶೆಟ್ಟರ

# ಮಹಿಳೆಯ ಶಿಕ್ಷಣದಿಂದಲೇ ಸುಶಿಕ್ಷಿತ ಸಮಾಜ ನಿರ್ಮಾಣ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಸಮಾಜದ ಕಣ್ಣಾಗಿರುವ ಮಹಿಳೆ ಶಿಕ್ಷಣವಂತಳಾದಾಗ ಮಾತ್ರ ಸುಶಿಕ್ಷಿತ ಹಾಗೂ ಆರೋಗ್ಯಕರ ಸಮಾಜ ನಿರ್ಮಾಣ ಸಾಧ್ಯ. ಮಹಿಳೆಯರು ತಮ್ಮ ಹಕ್ಕು, ಸ್ವಾತಂತ್ರ್ಯ ಮತ್ತು ಸಮಾನತೆ ಪಡೆಯಲು ಶಿಕ್ಷಣವಂತರಾಗಬೇಕು ಎಂದು ತಾಯಿ ಪಾರ್ವತಿ ಮಕ್ಕಳ ಬಳಗ ಸಂಸ್ಥೆಯ ಉಪಾಧ್ಯಕ್ಷೆ ಜಯಲಕ್ಷ್ಮಿ ಮಹಾಂತಶೆಟ್ಟರ ಹೇಳಿದರು.

ಪಟ್ಟಣದ ತಾಯಿ ಪಾರ್ವತಿ ಮಕ್ಕಳ ಬಳಗದಲ್ಲಿ ಹಮ್ಮಿಕೊಳ್ಳಲಾಗಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಹಿಳೆಯರು ಕುಟುಂಬ ವ್ಯವಸ್ಥೆಯಲ್ಲಷ್ಟೇ ಅಲ್ಲದೆ ಶಿಕ್ಷಣ, ಕೃಷಿ, ಆಡಳಿತ, ಉದ್ಯಮ, ವಿಜ್ಞಾನ, ರಕ್ಷಣೆ, ಸಾಮಾಜಿಕ, ರಾಜಕೀಯ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುವ ಮೂಲಕ ಸಮಾಜದ ಪ್ರಗತಿಗೆ ಮಹತ್ತರ ಕೊಡುಗೆ ನೀಡುತ್ತಿರುವುದು ಹೆಮ್ಮೆಯ ಸಂಗತಿ ಎಂದರು.

ಬಳಗದ ಕಾರ್ಯದರ್ಶಿ ಜಯಲಕ್ಷ್ಮಿ ಗಡ್ಡದೇವರಮಠ ಮಾತನಾಡಿ, ಬದಲಾದ ಜಗತ್ತಿನಲ್ಲಿ ಮಹಿಳೆಯರು ಸ್ತ್ರೀ ಸಮಾನತೆ, ಸರ್ಕಾರದ ಸೌಲಭ್ಯಗಳು ಮತ್ತು ಸಂವಿಧಾನಾತ್ಮಕ ಹಕ್ಕುಗಳನ್ನು ಪಡೆದು ಆತ್ಮವಿಶ್ವಾಸದಿಂದ ಸಮಾಜಮುಖಿ ಕಾರ್ಯಗಳಲ್ಲಿ ಮುನ್ನಡೆಯಬೇಕು ಎಂದು ಹೇಳಿದರು.

ರಾಜ್ಯ ಪ್ರಶಸ್ತಿ ಪುರಸ್ಕೃತ ಸಾಹಿತಿ ಲಲಿತಕ್ಕ ಕೆರಿಮನಿ ಮಾತನಾಡಿ, ಮಹಿಳೆ ಮಗಳು, ಪತ್ನಿ, ತಾಯಿ, ಸ್ನೇಹಿತೆ ಹಾಗೂ ಮಾರ್ಗದರ್ಶಿಯಾಗಿ ಸಮಾಜದ ಕಣ್ಣಾಗಿ ಕಾರ್ಯನಿರ್ವಹಿಸುತ್ತಾಳೆ. ಮನೆಯೇ ಮೊದಲ ಪಾಠಶಾಲೆ, ತಾಯಿಯಂತೇ ▶▶2ನೇ ಪುಟಕ್ಕೆ

# ಕೆ.ಎಚ್. ಪಾಟೀಲರ 101ನೇ ಜಯಂತ್ಯುತ್ಸವ:

## ಆಟೋ ಸ್ಟ್ಯಾಂಡ್ ಉದ್ಘಾಟನೆ



■ವಿಜಯಸಾಕ್ಷಿ ಸುದ್ದಿ, ಗದಗ

ನಾಡು ಮೆಚ್ಚಿದ ಜನನಾಯಕ, ಸಹಕಾರಿ ರಂಗದ ಭೀಷ್ಮ ದಿ. ಶ್ರೀ ಕೆ.ಎಚ್. ಪಾಟೀಲರ 101ನೇ ಜಯಂತ್ಯುತ್ಸವದ ಅಂಗವಾಗಿ, ಗದಗ ಜಿಲ್ಲಾ ಆಟೋ ಚಾಲಕರ ಮಾಲಕರ ಸಂಘದ ವತಿಯಿಂದ ಗಾನಯೋಗಿ ಪಂ. ಪುಟ್ಟರಾಜ ಗವಾಯಿಗಳವರ ಹೆಸರಿನ ಆಟೋ ಸ್ಟ್ಯಾಂಡ್ ಉದ್ಘಾಟನೆ ನೆರವೇರಿತು.

ಉದ್ಘಾಟನಾ ಸಮಾರಂಭದಲ್ಲಿ ಕಾಂಗ್ರೆಸ್ ಯುವ ಘಟಕದ ಅಧ್ಯಕ್ಷ ಕೃಷ್ಣಗೌಡ ಪಾಟೀಲ ರಿಬ್ಬನ್ ಕತ್ತರಿಸಿ, ಕೆ.ಎಚ್. ಪಾಟೀಲರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಸ್ಟ್ಯಾಂಡ್‌ಗೆ ಚಾಲನೆ ನೀಡಿದರು.

> "ಜನನಾಯಕರ ಆದರ್ಶಗಳನ್ನು ಅನುಸರಿಸುವುದು ಸಮಾಜದ ಅಭಿವೃದ್ಧಿಗೆ ಅಗತ್ಯ" .
> – **ಕೃಷ್ಣಗೌಡ ಪಾಟೀಲ,** ಯುವ ಕಾಂಗ್ರೆಸ್ ಜಿಲ್ಲಾ ಅಧ್ಯಕ್ಷ.

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ವಿಜಯ ಕಲ್ಮನಿ, ಉಪಾಧ್ಯಕ್ಷ ಮಂಜುನಾಥ ಅಗಸಿಮನಿ, ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಮೈಲಾರಪ್ಪ ಚಳ್ಳಮರದ, ಭೀಮ್ ಆರ್ಮಿ ಅಧ್ಯಕ್ಷ ಗೋಪಾಲ ಕೋಣಿಮನಿ, ಕಾಂಗ್ರೆಸ್ ಪರಿಶಿಷ್ಟ ವಿಭಾಗದ ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜುನ ಸಂಗಾಪೂರ ಸೇರಿದಂತೆ ಅನೇಕ ಮುಖಂಡರು ಉಪಸ್ಥಿತರಿದ್ದರು.

ಗಂಗಾಧರ ಬ್ಯಾಗೋಟಿ, ಈರಣ್ಣ ಗೆಜ್ಜೆಳ್ಳಿ, ಚಂದ್ರು ದೊಡ್ಡಮನಿ, ಮನೋಹರ ಆದೋನಿ, ಪ್ರಶಾಂತ ದೊಡ್ಡಮನಿ, ಚಂದ್ರಶೇಖರ ಸಾಲಮನಿ, ಹೇಮಂತ ಕಾಳೆ, ಉಮರ ನಮಾಜಿ, ಅಶೋಕ ಕುಂದಗೋಳ ಸೇರಿದಂತೆ ನೂರಾರು ಆಟೋ ಚಾಲಕರು ಕಾರ್ಯಕ್ರಮದಲ್ಲಿ ಭಾಗವಹಿಸಿದರು.

### ಶಾಂತಿ ಸಭೆಯಲ್ಲಿ ಸಿಪಿಐ ಬಿ.ವಿ. ನ್ಯಾಮಗೌಡ ಕರೆ – ಅನುಮತಿ ಪಡೆದು ಸರಳವಾಗಿ ಹಬ್ಬ ಆಚರಿಸಲು ಸೂಚನೆ

# ರಂಜಾನ್–ಯುಗಾದಿ ಹಬ್ಬಗಳು: ಸೌಹಾರ್ದತೆಗೆ ಒತ್ತು!

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ರಂಜಾನ್ ಹಾಗೂ ಯುಗಾದಿ ಹಬ್ಬಗಳು ಒಂದೇ ಸಮಯದಲ್ಲಿ ಬಂದಿರುವ ಹಿನ್ನೆಲೆ, ಪಟ್ಟಣದಲ್ಲಿ ಸೌಹಾರ್ದತೆ ಮತ್ತು ಸಹೋದರತ್ವದಿಂದ ಹಬ್ಬಗಳನ್ನು ಶಾಂತಿಯುತವಾಗಿ ಆಚರಿಸಬೇಕು ಎಂದು ಸಿಪಿಐ ಬಿ.ವಿ. ನ್ಯಾಮಗೌಡ ಹೇಳಿದರು.

ಸೋಮವಾರ ಪಟ್ಟಣದ ಪೊಲೀಸ್ ಠಾಣೆಯಲ್ಲಿ ರಂಜಾನ್ ಹಬ್ಬದ ಪ್ರಯುಕ್ತ ಆಯೋಜಿಸಿದ್ದ ಸಾರ್ವಜನಿಕರ ಶಾಂತಿ ಸಭೆಯಲ್ಲಿ ಮಾತನಾಡಿದ ಅವರು, ಹಬ್ಬಗಳನ್ನು ಸರಳವಾಗಿ ಹಾಗೂ ಶಾಂತಿಯುತವಾಗಿ ಆಚರಿಸುವಂತೆ ಕರೆ ನೀಡಿದರು.

ಮೈಕ್, ಡಿಜೆ ಸೇರಿದಂತೆ ಇತರೆ ಕಾರ್ಯಕ್ರಮಗಳಿಗೆ ಕಡ್ಡಾಯವಾಗಿ ಅನುಮತಿ ಪಡೆಯಬೇಕೆಂದು ಸೂಚಿಸಿದರು. ಶಾಂತಿ ಕದಡುವಂತಹ ಯಾವುದೇ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಬಾರದು ಎಂದು ಯುವಕರಿಗೆ ಸಲಹೆ ನೀಡಿದರು.




ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಸೂಕ್ತ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದ್ದು, ಶಾಂತಿಗೆ ಭಂಗ ತಂದವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

> "ಶಾಂತಿ ಕದಡುವ ಯಾವುದೇ ಕೃತ್ಯಗಳಿಗೆ ಅವಕಾಶವಿಲ್ಲ; ಸೌಹಾರ್ದತೆ ಕಾಪಾಡುವುದು ಎಲ್ಲರ ಜವಾಬ್ದಾರಿ."
> – **ಬಿ.ವಿ. ನ್ಯಾಮಗೌಡ,** ಸಿಪಿಐ.

ಈ ಸಂದರ್ಭದಲ್ಲಿ ಪಿಎಸ್‌ಐ ನಾಗರಾಜ ಗಡದ ಮಾತನಾಡಿ, ರಂಜಾನ್ ಹಬ್ಬವನ್ನು ಸೌಹಾರ್ದತೆಯಿಂದ ಆಚರಿಸಿ, ಕಾನೂನು ಸುವ್ಯವಸ್ಥೆ ಕಾಪಾಡಲು ಎಲ್ಲರೂ ಸಹಕರಿಸಬೇಕು ಎಂದರು.

ಹಿಂದೂ–ಮುಸ್ಲಿಂ ಮುಖಂಡರು ಮಾತನಾಡಿ, ಪರಸ್ಪರ ಸೌಹಾರ್ದತೆಯಿಂದ ಹಬ್ಬಗಳನ್ನು ಆಚರಿಸುವ ಮೂಲಕ ಏಕತೆ ಸಂದೇಶವನ್ನು ಸಾರೋಣ ಎಂದು ಅಭಿಪ್ರಾಯಪಟ್ಟರು.

ಸಭೆಯಲ್ಲಿ ಪೂರ್ಣಾಜಿ ಕರಾಟೆ, ಸುಲೇಮಾನಸಾಬ್ ಕಣಕೆ, ಮುಕ್ತಾರ ಅಹ್ಮದ ಗದಗ, ಯೂನುಸ್ ಚೌರಿ, ಇಸ್ಮಾಯಿಲ್ ಆಡೂರ, ಮಾಬುಸಾಬ್ ಮುಳಗುಂದ, ಖಾಜಾಪೀರ ಜಮಖಂಡಿ, ಲಕ್ಷ್ಮಣ ಲವಾಣಿ, ದಾದಾಪೀರ ಸೊಲ್ಲಾಪುರ, ಭರಮಪ್ಪ ಸೊರಟೂರ, ಶಂಕ್ರಪ್ಪ ನಾಗನಗೌಡ, ವಿ.ಎಫ್. ಅಂಗಡಿ, ಮೈನುದ್ದೀನ ಮಟ್ಟಿ, ಗೌಸಮೊದಿನ ಜಮಖಂಡಿ ಸೇರಿದಂತೆ ಹಲವು ಮುಖಂಡರು ಹಾಗೂ ಸಾರ್ವಜನಿಕರು ಹಾಜರಿದ್ದರು.

## ಮುಳಗುಂದದಲ್ಲಿ ಮಾ. 19-20 ರಂದು ಸಿದ್ದೇಶ್ವರ ಜಾತ್ರಾ ಮಹೋತ್ಸವ



■ ವಿಜಯಸಾಕ್ಷಿ ಸುದ್ದಿ, ಮುಳಗುಂದ

ಪಟ್ಟಣದ ಐತಿಹಾಸಿಕ ಸಿದ್ದೇಶ್ವರ ದೇವಸ್ಥಾನದ ಜಾತ್ರಾ ಮಹೋತ್ಸವ ಮಾರ್ಚ್ 19 ಮತ್ತು 20ರಂದು ನಡೆಯಲಿದೆ ಎಂದು ಜಾತ್ರಾ ಸಮಿತಿ ಅಧ್ಯಕ್ಷ ಸಂಜಯ ನೀಲಗುಂದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಮಾರ್ಚ್ 19ರಂದು ಗುರುವಾರ ಸಂಜೆ 5 ಗಂಟೆಗೆ ಸಕಲ ವಾದ್ಯ ವೈಭವಗಳೊಂದಿಗೆ ಸಿದ್ದೇಶ್ವರ ಮಾಹಾರಥೋತ್ಸವ ಜರುಗಲಿದೆ. ರಾತ್ರಿ 7 ಗಂಟೆಗೆ ಅನುಭಾವ ಗೋಷ್ಠಿ–1 ನಡೆಯಲಿದ್ದು ಮಣಕವಾಡ ದೇವ ಮಂದಿರದ ಅಭಿನವ ಅನ್ನದಾನೇಶ್ವರ ಮಹಾಸ್ವಾಮಿಗಳು ಸಾನಿಧ್ಯ ವಹಿಸಲಿದ್ದಾರೆ. ನೀಲಗುಂದ ಗುದ್ನೇಶ್ವರಮಠದ ಪ್ರಭುಲಿಂಗ ದೇವರು ಸಮ್ಮುಖ ವಹಿಸಲಿದ್ದು ರಾಮಣ್ಣಾ ಕಮಾಜಿ ಅಧ್ಯಕ್ಷತೆ ವಹಿಸಲಿದ್ದಾರೆ.

ಕಾರ್ಯಕ್ರಮವನ್ನು ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷ ಡಿ.ಆರ್. ಪಾಟೀಲ ಉದ್ಘಾಟಿಸಲಿದ್ದು ಬಸವ ಬೆಳವಿ ವಿರಕ್ತಮಠದ ಶರಣ ಬಸವದೇವರು ಉಪನ್ಯಾಸ ನೀಡಲಿದ್ದಾರೆ. ಸಾಂಸ್ಕೃತಿಕ ಕಾರ್ಯಕ್ರಮವನ್ನು ಕೊತಬಾಳದ ಜೀವನ ಬೆಳಕು ಜಾನಪದ ಕಲಾ ತಂಡ ನಡೆಸಲಿದೆ.

ಮಾರ್ಚ್ 20ರಂದು ಸಂಜೆ 5 ಗಂಟೆಗೆ ಕಡುಬಿನ ಕಾಳಗ ಹಾಗೂ ರಾತ್ರಿ 7 ಗಂಟೆಗೆ ಅನುಭಾವ ಗೋಷ್ಠಿ–2 ನಡೆಯಲಿದೆ. ಕುಕನೂರ ಅನ್ನದಾನೇಶ್ವರ ಶಾಖಾಮಠದ ಮಹಾದೇವ ಮಹಾಸ್ವಾಮಿಗಳು ಸಾನಿಧ್ಯ ವಹಿಸಲಿದ್ದು ಬಿ.ವಿ. ಸುಂಕಾಪೂರ ಅಧ್ಯಕ್ಷತೆ ವಹಿಸಲಿದ್ದಾರೆ.

ಈ ಸಂದರ್ಭದಲ್ಲಿ ಪ್ರಗತಿಪರ ರೈತರು ಹಾಗೂ ಪೌರಕಾರ್ಮಿಕರನ್ನು ಸನ್ಮಾನಿಸಲಾಗುತ್ತದೆ. ಕೊಪ್ಪಳದ ಗುರು ಅಭಿನವ ಮೆಲೋಡಿ ಆರ್ಕೆಸ್ಟ್ರಾ ತಂಡದಿಂದ ರಸಮಂಜರಿ ಕಾರ್ಯಕ್ರಮ ನಡೆಯಲಿದೆ. ಮಧ್ಯಾಹ್ನ ಮತ್ತು ರಾತ್ರಿ ಮಹಾದಾಸೋಹ ವ್ಯವಸ್ಥೆ ಇರಲಿದೆ.

ಪತ್ರಿಕಾಗೋಷ್ಠಿಯಲ್ಲಿ ರಾಮಣ್ಣಾ ಕಮಾಜಿ, ಬಿ.ವಿ. ಸುಂಕಾಪೂರ, ಹೊನ್ನಪ್ಪ ನೀಲಗುಂದ, ಅಶೋಕ ಹುಣಶಿಮರದ, ಜಗದೀಶ ವಿಜಾಪೂರ, ವಿಜಯ ನೀಲಗುಂದ, ಗುರಣ್ಣಾ ಹೊಂಬಳ, ಗಂಗಪ್ಪ ಸುಂಕಾಪೂರ ಸೇರಿದಂತೆ ಜಾತ್ರಾ ಸಮಿತಿಯ ಸದಸ್ಯರು ಉಪಸ್ಥಿತರಿದ್ದರು.

## ಪ್ರಶ್ನೆಗಳಿಗೆ ಉತ್ತರಿಸದ ಸಚಿವರು: ಸದನ ಮುಂದೂಡಿದ ಸ್ಪೀಕರ್ ಯು.ಟಿ ಖಾದರ್

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಶಾಸಕರು ಕೇಳುವ ಪ್ರಶ್ನೆಗಳಿಗೆ ಉತ್ತರ ಒದಗಿಸದ ಸಚಿವರು ಮತ್ತು ಅಧಿಕಾರಿಗಳ ವಿರುದ್ಧ ಸೋಮವಾರ (ಮಾ.16) ತೀವ್ರ ಅಸಮಾಧಾನ ವ್ಯಕ್ತಪಡಿಸಿದ ವಿಧಾನಸಭೆಯ ಸ್ಪೀಕರ್ ಯು.ಟಿ ಖಾದರ್, ಸದನವನ್ನು ಮುಂದೂಡಿಕೆ ಮಾಡಿ ಸರ್ಕಾರಕ್ಕೆ ಬಿಸಿ ಮುಟ್ಟಿಸಿದರು.

ವಿಧಾನಸಭೆಯಲ್ಲಿ ಲಿಖಿತ ಉತ್ತರ ಪ್ರಕ್ರಿಯೆ ಕೈಗೆತ್ತಿಕೊಂಡ ಸಂದರ್ಭದಲ್ಲಿ ಗೃಹ ಸಚಿವ ಡಾ.ಜಿ ಪರಮೇಶ್ವರ್, 230 ಲಿಖಿತ ಮೂಲಕ ಪ್ರಶ್ನೆಗಳ ಪೈಕಿ ಕೇವಲ 84ಕ್ಕೆ ಉತ್ತರಗಳನ್ನು ಮಂಡಿಸಿದರು.

ಈ ವೇಳೆ ಎದ್ದು ನಿಂತ ವಿಪಕ್ಷ ನಾಯಕ ಆರ್. ಅಶೋಕ್, ಯಾವ ರೀತಿಯಲ್ಲಿ ಲೆಕ್ಕ ಹಾಕಿದರೂ ಶೇಕಡ 50ರ ಗಡಿ ದಾಟಿಲ್ಲ.

## ಮಹಿಳೆಯ ಶಿಕ್ಷಣದಿಂದಲೇ ಸುಶಿಕ್ಷಿತ ಸಮಾಜ ನಿರ್ಮಾಣ

▶▶ ಮೊದಲನೇ ಪುಟದಿಂದ

ಮೊದಲ ಗುರು ಎಂಬಂತೆ ಮಹಿಳೆಯರಿಗೆ ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚಿನ ಜವಾಬ್ದಾರಿ ಇದೆ. ಅಕ್ಷರಜ್ಞಾನ ಮಹಿಳೆಗೆ ಸ್ವಾಭಿಮಾನದ ಬದುಕು ನೀಡುತ್ತದೆ ಎಂದರು.

ಈ ಸಂದರ್ಭದಲ್ಲಿ ರಾಜ್ಯ ಪ್ರಶಸ್ತಿ ಪುರಸ್ಕೃತ ಸಾಹಿತಿ ಲಲಿತಕ್ಕ ಕೆರಿಮನಿ, ಹಿರಿಯರಾದ ರೋಹಿಣಿಬಾಯಿ ಬಹಾದ್ದೂರ ದೇಸಾಯಿ, ಶಾರಕ್ಕ ಮಹಾಂತಶೆಟ್ಟರ, ಸಾವಿತ್ರಮ್ಮ ಹೂವಿನ ಹಾಗೂ ಎಸ್.ಎಂ. ಹಾದಿಮನಿ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಜೆ.ಡಿ. ಲಮಾಣಿ, ವಿಜಯ ಬಿಳೆಎಲಿ, ಸ್ವಾತಿ ಪೈ, ಗೋಪಾ ನವಲೆ, ಪ್ರಭುಗೌಡ ಯಕ್ಕಿಕೊಪ್ಪ, ಸರಸ್ವತಿ ಹುಲ್ಲಣ್ಣವರ, ಹನುಮಂತಪ್ಪ ಭಜಂತ್ರಿ, ಮಲ್ಲಿಕಾರ್ಜುನ ಶಿವಣ್ಣವರ, ಎಂ.ಸಿ. ಹಿರೇಮಠ, ಆರ್.ಎಂ. ಕದಡಿ, ಸಂತೋಷ ಮುಳಗುಂದ ಸೇರಿದಂತೆ ಹಲವರು ಉಪಸ್ಥಿತರಿದ್ದರು.

### ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಶೈಲ ತಳವಾರ ಅಭಿಮತ

# ಪುರುಷರಿಗೆ ಸಮನಾಗಿ ಬೆಳೆಯುತ್ತಿರುವ ಮಹಿಳೆಯರು!

■ ವಿಜಯಸಾಕ್ಷಿ ಸುದ್ದಿ, ನರಗುಂದ

ಹೆಣ್ಣುಮಕ್ಕಳ ಸಾಧನೆ ಅಪಾರವಾಗಿದ್ದು, ಇಂದಿನ ಸಮಾಜದಲ್ಲಿ ಅವರು ಪುರುಷರ ಸಮನಾಗಿ ಬೆಳೆಯುತ್ತಿದ್ದಾರೆ ಎಂದು ತಾಲೂಕು ದಂಡಾಧಿಕಾರಿ ಶೈಲ ತಳವಾರ ಹೇಳಿದರು.

'ಯತ್ರ ನಾರ್ಯಸ್ತು ಪೂಜ್ಯಂತೆ ತತ್ರ ರಮಂತೇ ದೇವತಾ' ಎಂಬ ನುಡಿಗಟ್ಟಿನಂತೆ ಮಹಿಳೆಯನ್ನು ಗೌರವಿಸುವ ಸ್ಥಳದಲ್ಲಿ ದೇವತೆಗಳು ನೆಲೆಸಿರುತ್ತಾರೆ ಎಂದು ಅವರು ಅಭಿಪ್ರಾಯಪಟ್ಟರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತಾಲೂಕು ಕಾನೂನು ಸೇವಾ ಸಮಿತಿ ಹಾಗೂ ಶಿಶು ಅಭಿವೃದ್ಧಿ ಯೋಜನೆ ನರಗುಂದ ಇವರ ಸಹಯೋಗದಲ್ಲಿ ತಾಲ್ಲೂಕು ಸಭಾಭವನದಲ್ಲಿ ನಡೆದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕಾರ್ಯಕ್ರಮವನ್ನು ದಿವಾಣಿ ನ್ಯಾಯಾಧೀಶರಾದ ಜಿನ್ನಪ್ಪ ಚೌಗಲಾ ಸಸಿ ನೀರುಣಿಸುವ ಮೂಲಕ ಉದ್ಘಾಟಿಸಿದರು. ಶಿಶು ಅಭಿವೃದ್ಧಿ ಯೋಜನಾಧಿಕಾರಿ ವೆಂಕಪ್ಪ ಗಿರಿತಿಮ್ಮಣ್ಣ ಮಾತನಾಡಿ, ಈ ವರ್ಷದ ಮಹಿಳಾ ದಿನಾಚರಣೆಯ ಥೀಮ್ "ಪರಸ್ಪರ ಬೆಂಬಲ ಮತ್ತು ಸಹಯೋಗ" ಎಂದು ತಿಳಿಸಿ, ತಾಯಿ, ಮಗಳು, ಸೊಸೆ ಹಾಗೂ ಕುಟುಂಬದ ಯಜಮಾನಿಯಾಗಿ ಬದುಕುತ್ತಿರುವ ಎಲ್ಲ ಮಹಿಳೆಯರಿಗೆ ಶುಭಾಶಯಗಳನ್ನು ತಿಳಿಸಿದರು.



ಜಿನ್ನಪ್ಪ ಚೌಗಲಾ ಅವರು ಮಾತನಾಡಿ, ಮಹಿಳೆಯರ ಕಾನೂನು ಹಾಗೂ ಕೌಟುಂಬಿಕ ರಕ್ಷಣೆಯ ಕುರಿತು ಮಾಹಿತಿ ನೀಡಿದರು. ಬಾಲ್ಯ ವಿವಾಹ, ಸ್ತ್ರೀ–ಸಮಾನತೆ ಕುರಿತು ಜಾಗೃತಿ ಮೂಡಿಸಿ, ಯಾವುದೇ ಸಮಸ್ಯೆ ಎದುರಾದರೆ ಉಚಿತ ಕಾನೂನು ಸಲಹೆ ಪಡೆಯುವಂತೆ ಸಲಹೆ ನೀಡಿದರು. ಮಹಿಳೆಯರು ವಿವಿಧ ಕ್ಷೇತ್ರಗಳಲ್ಲಿ ತೊಡಗಿಸಿಕೊಳ್ಳಲು ಮುಂದಾಗಬೇಕು ಎಂದು ಪ್ರೋತ್ಸಾಹಿಸಿದರು.

ಸಂಪನ್ಮೂಲ ವ್ಯಕ್ತಿ ಮಂಗಳಾ ಬಿ. ಪಾಟೀಲ ಮಾತನಾಡಿ, "ಭಾರತದಲ್ಲಿ ಮಹಿಳೆಗೆ ಗೌರವವಿದ್ದು, ಜೀವನದ ಪ್ರತಿಯೊಂದು ಹಂತದಲ್ಲೂ ಮಹಿಳೆ ಶಕ್ತಿಯಾಗಿರುತ್ತಾಳೆ. ಇಂದಿನ ದಿನಗಳಲ್ಲಿ ಮಹಿಳೆಗೆ ಬೇಕಿರುವುದು ಅನುಕಂಪವಲ್ಲ, ಅವಕಾಶ" ಎಂದು ಹೇಳಿದರು.

> "ಹೆಣ್ಣುಮಕ್ಕಳು ಇಂದು ಎಲ್ಲ ಕ್ಷೇತ್ರಗಳಲ್ಲೂ ಮುನ್ನಡೆಯುತ್ತಿದ್ದು, ಅವರಿಗೆ ಬೇಕಾಗಿರುವುದು ಅನುಕಂಪವಲ್ಲ, ಅವಕಾಶ. ಮಹಿಳೆಯನ್ನು ಗೌರವಿಸುವ ಸಮಾಜದಲ್ಲೇ ನಿಜವಾದ ಅಭಿವೃದ್ಧಿ ಸಾಧ್ಯ."
> – **ಶೈಲ ತಳವಾರ,** ತಹಸೀಲ್ದಾರ್, ನರಗುಂದ.

> "ಹೆಣ್ಣುಮಕ್ಕಳಿಗೆ ಅನುಕಂಪವಲ್ಲ, ಅವಕಾಶ ನೀಡಿದರೆ ಅವರು ಎಲ್ಲಾ ಕ್ಷೇತ್ರಗಳಲ್ಲಿ ಸಾಧನೆ ಮಾಡುತ್ತಾರೆ."
> – **ಮಂಗಳಾ ಬ ಪಾಟೀಲ,** ಸಂಪನ್ಮೂಲ ವ್ಯಕ್ತಿ.

ಆರೋಗ್ಯಾಧಿಕಾರಿ ರೇಣುಕಾ ಕೊರವನ್ ಅವರು ಲಸಿಕೆ ಕುರಿತು ಜಾಗೃತಿ ಮೂಡಿಸಿ, 14 ವರ್ಷದ ಕಿಶೋರಿಯರಿಗೆ ಲಸಿಕೆ ಕಡ್ಡಾಯವಾಗಿರಬೇಕು ಎಂದು ತಿಳಿಸಿದರು. ಆರೋಗ್ಯ ತಪಾಸಣೆ ಹಾಗೂ ಕ್ಯಾನ್ಸರ್ ಮುಂತಾದ ಮಾರಕ ರೋಗಗಳಿಂದ ಮಹಿಳೆಯರನ್ನು ರಕ್ಷಿಸುವ ಮಹತ್ವವನ್ನು ವಿವರಿಸಿದರು.

ಕಾರ್ಯಕ್ರಮದಲ್ಲಿ ನಿವೃತ್ತಿಯ ಅಂಚಿನಲ್ಲಿರುವ ಇಲಾಖೆಯ ಕಾರ್ಯಕರ್ತೆ–ಸಹಾಯಕಿಯರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಕಾರ್ಯನಿರ್ವಾಹಕ ಅಧಿಕಾರಿ ಎಸ್.ಕೆ. ಇನಾಂದಾರ, ಶಿಕ್ಷಣಾಧಿಕಾರಿ ಮುತ್ತಪ್ಪ ಕಂಬಳಿ, ಆರೋಗ್ಯಾಧಿಕಾರಿ ರೇಣುಕಾ ಕೊರವನ್, ವೃತ್ತ ನಿರೀಕ್ಷಕರು ಮಂಜುನಾಥ, ಸಹಾಯಕ ಅಭಿಯೋಜಕರು ಹನಮಂತಪ್ಪ ಅರಳಿ, ವಕೀಲರ ಸಂಘದ ಅಧ್ಯಕ್ಷ ಕೆ.ಎಸ್. ಹೂಲಿ, ಮೇಲ್ವಿಚಾರಕಿ ಭಾರತಿ ಕಾಲಚೆಟ್ಟಿ, ಪರಿಮಳ ಹೂಗಾರ, ಜಗದೀಶ ಜ್ಞಾನೋಪಂತ ಸೇರಿದಂತೆ ಹಲವರು ಉಪಸ್ಥಿತರಿದ್ದರು.

### ಮುಳಗುಂದದಲ್ಲಿ ರಾಣಿ ಚನ್ನಮ್ಮ ಮಹಿಳಾ ಹಿತರಕ್ಷಣಾ ಟ್ರಸ್ಟ್ ಉದ್ಘಾಟನೆ – ಮಹಿಳಾ ದಿನಾಚರಣೆ ಆಚರಣೆ

## ಮಹಿಳೆ ತ್ಯಾಗಮಯಿ, ಸಮಾಜದ ಕಣ್ಣು : ಪ್ರಭುಲಿಂಗ ದೇವರು



■ ವಿಜಯಸಾಕ್ಷಿ ಸುದ್ದಿ, ಮುಳಗುಂದ

ಮಹಿಳೆ ತ್ಯಾಗ ಜೀವಿ, ಕರುಣಾಮಯಿ ಹಾಗೂ ಮಮತೆಯ ಸಾಕಾರ ಮೂರ್ತಿಯಾಗಿದ್ದು ಸಮಾಜದ ಕಣ್ಣಾಗಿ ಇರುವ ಮಹಿಳೆಯರನ್ನು ಗೌರವದಿಂದ ಕಾಣಬೇಕು ಎಂದು ನೀಲಗುಂದ ಗುದ್ನೇಶ್ವರಮಠದ ಪ್ರಭುಲಿಂಗ ದೇವರು ಹೇಳಿದರು.

ಪಟ್ಟಣದ ಬಾಲಲೀಲಾ ಮಾಹಾಂತ ಶಿವಯೋಗಿ ಗವಿಮಠದಲ್ಲಿ ರಾಣಿ ಚನ್ನಮ್ಮ ಮಹಿಳಾ ಹಿತರಕ್ಷಣಾ ಟ್ರಸ್ಟ್ (ರಿ) ಉದ್ಘಾಟನೆ ಹಾಗೂ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

ಮಹಿಳೆಯರಲ್ಲಿ ಅಪಾರ ಶಕ್ತಿ ಅಡಗಿದೆ. ಅವರು ಎಲ್ಲ ಕ್ಷೇತ್ರಗಳಲ್ಲೂ ತಮ್ಮ ಛಾಪು ಮೂಡಿಸಿದ್ದಾರೆ. ಮಹಿಳೆ ಕೇವಲ ಕುಟುಂಬದ ಕಣ್ಣಾಗದೇ ಸಮಾಜದ ಕಣ್ಣಾಗಿ ಕಾರ್ಯನಿರ್ವಹಿಸುತ್ತಿದ್ದು ಕಷ್ಟ–ನಷ್ಟಗಳಿಗೆ ಎದೆಗುಂದದೇ ಜೀವನ ಸಾಗಿಸುವ ತ್ಯಾಗಮಯಿ ಎಂದು ಹೇಳಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ವಸಂತ ಉಲ್ಲತ್ತಿ ಮಾತನಾಡಿ, ಮಹಿಳೆ ಕುಟುಂಬದ ಜೊತೆಗೆ ಸಮಾಜದ ಬೆಳವಣಿಗೆಯಲ್ಲೂ ಮಹತ್ವದ ಪಾತ್ರ ವಹಿಸುತ್ತಾಳೆ. ಸಂಸ್ಕಾರ ಮತ್ತು ಸಂಸ್ಕೃತಿಯನ್ನು ಉಳಿಸಿ ಮಕ್ಕಳ ಭವಿಷ್ಯಕ್ಕೆ ದಾರಿ ದೀಪವಾಗುವ ಮಹಿಳೆಯರನ್ನು ಗೌರವದಿಂದ ಕಾಣಬೇಕು ಎಂದರು.

ಮಾಲಾದೇವಿ ದಂದರಗಿ ಉಪನ್ಯಾಸ ನೀಡಿ, 12ನೇ ಶತಮಾನದಲ್ಲೇ ಶರಣರು ಮಹಿಳೆಗೆ ಸ್ವಾತಂತ್ರ್ಯ ಮತ್ತು ಉನ್ನತ ಸ್ಥಾನಮಾನ ನೀಡಿದರು. ಮಹಿಳೆಯರು ಹಿಂಜರಿಕೆ ಬಿಟ್ಟು ಸಬಲರಾಗಬೇಕು, ಮಹಿಳಾ ಸಂಘಟನೆಗಳ ಮೂಲಕ ಆರ್ಥಿಕವಾಗಿ ಸದೃಢರಾಗಬಹುದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಮಾಜದಲ್ಲಿ ಸಾಧನೆ ಮಾಡಿದ ಮಂಗಳಾ ನೀಲಗುಂದ, ಶೋಭಾ ಪಾಟೀಲ, ನಿವೃತ್ತ ಶಿಕ್ಷಕಿ ವಿ.ಬಿ. ಪಾಟೀಲ ಹಾಗೂ ಎಸ್ಎಸ್ಎಲ್‌ಸಿ ಮತ್ತು ಪಿಯುಸಿಯಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿನಿಯರು ಹಾಗೂ ಹಿರಿಯ ಮಹಿಳೆಯರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ನೀಲಮ್ಮ ಬೋಳನವರ, ರಾಮಣ್ಣಾ ಕಮಾಜಿ, ವಿ.ಬಿ. ಪಾಟೀಲ, ಮಂಗಳಾ ನೀಲಗುಂದ, ಶೋಭಾ ಪಾಟೀಲ, ಕವಿತಾ ಬಿನ್ನಾಳ, ಬಸಮ್ಮಾ ಕಣವಿ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಅಧ್ಯಕ್ಷತೆಯನ್ನು ಟ್ರಸ್ಟ್ ಅಧ್ಯಕ್ಷೆ ನಿರ್ಮಲಾ ಚಿಂಚಲಿ ವಹಿಸಿದ್ದರು.

### ಸ್ಪರ್ಧೆಗಳು – ಸ್ಪರ್ಧಾತ್ಮಕ ಮನೋಭಾವ ಬೆಳೆಸುವಲ್ಲಿ ಪ್ರಮುಖ: ಪ್ರೇಮಾ ಹಂದಿಗೋಳ

## ಆನಂದ ಆಶ್ರಮದ ಅಕ್ಕನ ಬಳಗದಿಂದ ಮಹಿಳಾ ದಿನಾಚರಣೆ

■ ವಿಜಯಸಾಕ್ಷಿ ಸುದ್ದಿ, ಗದಗ

ಸ್ಪರ್ಧೆಗಳು ನಮ್ಮಲ್ಲಿ ಸ್ಪರ್ಧಾತ್ಮಕ ಮನೋಭಾವನೆಗಳನ್ನು ಮೂಡಿಸುವುದರ ಜೊತೆ–ಗೆ ಕೌಶಲ್ಯಗಳನ್ನು ಹೆಚ್ಚಿಸಿ ಆತ್ಮವಿಶ್ವಾಸವನ್ನು ವೃದ್ಧಿಸಲು ಸಹಕಾರಿಯಾಗಿವೆ ಎಂದು ನಿವೃತ್ತ ಪ್ರಾಚಾರ್ಯರಾದ ಪ್ರೇಮಾ ಹಂದಿಗೋಳ ಹೇಳಿದರು.

ಅವರು ಗದುಗಿನ ಆನಂದ ಆಶ್ರಮದ ಅಕ್ಕನ ಬಳಗದಿಂದ ಮಹಿಳಾ ದಿನಾಚರಣೆಯ ಅಂಗವಾಗಿ ಮಹಿಳೆಯರಿಗಾಗಿ ಏರ್ಪಡಿಸಿದ್ದ ವಿವಿಧ ಸ್ಪರ್ಧೆಗಳ ನಿರ್ಣಾಯಕರಾಗಿ ಪಾಲ್ಗೊಂಡು ಮಾತನಾಡಿದರು.

ಸ್ಪರ್ಧೆಗಳು ಸೋಲು–ಗೆಲುವಿಗೆ ಮಾತ್ರ ಸೀಮಿತವಾಗದೇ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿರಬೇಕು. ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಇಂತಹ ಸ್ಪರ್ಧೆಗಳಲ್ಲಿ ಭಾಗವಹಿಸುವ ಹವ್ಯಾಸವನ್ನು ರೂಢಿಸಿಕೊಳ್ಳಬೇಕು ಎಂದು ತಿಳಿಸಿದರು.

ಇನ್ನೋರ್ವ ನಿರ್ಣಾಯಕರಾಗಿ ಆಗಮಿಸಿದ್ದ ರೂಪಾ ಹರ್ಲಾಪೂರ ಮಾತನಾಡಿ, ಜೀವನದ ಪ್ರತಿಯೊಂದು ಹಂತದಲ್ಲೂ ಸ್ಪರ್ಧೆಗಳು ಅಗತ್ಯ. ಅವು ನಮ್ಮಲ್ಲಿ ಸಾಧನೆ ಮಾಡುವ ಮನೋಭಾವನೆ ಹಾಗೂ ಛಲವನ್ನು ಬೆಳೆಸುತ್ತವೆ. ಕಠಿಣ ಪರಿಶ್ರಮದಿಂದ ಗುರಿ ತಲುಪಲು ಸ್ಪರ್ಧೆಗಳು ಪ್ರೇರಣೆಯಾಗಿ ಕಾರ್ಯನಿರ್ವಹಿಸುತ್ತವೆ ಎಂದು ಹೇಳಿದರು. ಪ್ರಾಸ್ತಾವಿಕವಾಗಿ ನೀಲಾಂಭಿಕಾ ತೋಟದ ಮಾತನಾಡಿ, ಸೋಲು ಮತ್ತು ಗೆಲುವನ್ನು ಸಮಾನವಾಗಿ ಸ್ವೀಕರಿಸುವ ಗುಣವನ್ನು ಸ್ಪರ್ಧೆಗಳು ಕಲಿಸುತ್ತವೆ. ಸ್ಪರ್ಧಾತ್ಮಕ ವಾತಾವರಣವು ವಿಭಿನ್ನ ಆಲೋಚನೆಗಳನ್ನು ಮೂಡಿಸಿ ಪ್ರತಿಭೆಯ ಅನಾವರಣಕ್ಕೆ ಅವಕಾಶ ಕಲ್ಪಿಸುತ್ತದೆ ಎಂದು ತಿಳಿಸಿದರು.

ಮಹಿಳೆಯರಿಗಾಗಿ ಆಯೋಜಿಸಿದ್ದ ವಿವಿಧ ಸ್ಪರ್ಧೆಗಳಲ್ಲಿ ನೀಲಾ ತೋಟದ, ಮಮತಾ ಸಿಂಧೆ, ದ್ರಾಕ್ಷಾಯಣಿ ಪ್ರಭಣ್ಣವರ, ಅಂಬಿಕಾ ಕರ್ಣೆ, ದೀಪಿಕಾ ತೋಟದ, ಲಕ್ಷ್ಮಿ ಅಬ್ಬಿಗೇರಿ, ಪುಷ್ಪಾ ವಾರದ, ಜ್ಯೋತಿ ಅಂಗಡಿ ಮುಂತಾದವರು ಬಹುಮಾನಗಳನ್ನು ಪಡೆದರು.

ಭಾಗ್ಯಲಕ್ಷ್ಮಿ ಶಿರೋಳ ಹಾಗೂ ಶಾಂತಾ ತುಪ್ಪದ ಕಾರ್ಯಕ್ರಮವನ್ನು ನಿರೂಪಿಸಿದರು. ಚನ್ನಮ್ಮ ಸಂಶಿ ವಂದಿಸಿದರು. ಕಾರ್ಯಕ್ರಮದಲ್ಲಿ ಜಯಶ್ರೀ ಉಗಲಾಟದ, ಶಿವಲೀಲಾ ಅಕ್ಕಿ, ರೇಣುಕಾ ಅಮಾತ್ಯ, ವಿದ್ಯಾ ಹುಲಬನ್ನಿ, ನಿರ್ಮಲಾ ಪಾಟೀಲ, ಕುಸುಮಾ ದಾಸರ, ಭಾಗ್ಯಾ ಶಿರೋಳ, ವಿಜಯಲಕ್ಷ್ಮಿ ಇಳಕಲ್ಲ, ಉಷಾ ಅಳಗುಂಡಗಿ, ಶಕುಂತಲಾ ಅಂಗಡಿ, ಗೀತಾ ಚವಡಿ, ಪುಷ್ಪಾ ರೊಟ್ಟಿ, ಸುಶೀಲಾ ಸದ್ಲಾಪೂರ, ಶಾಂತಾ ನವಲಗುಂದ ಮುಂತಾದವರು ಉಪಸ್ಥಿತರಿದ್ದರು.




### ಗಜೇಂದ್ರಗಡದಲ್ಲಿ ಸಮಾಜಮುಖಿ ಕಾರ್ಯ । ಜಕಾತ್ ಮೂಲಕ ಬಡವರಿಗೂ ಹಬ್ಬದ ಸಂಭ್ರಮ

# ಲೆಜೆಂಡ್ ಬ್ರದರ್ಸ್ ವತಿಯಿಂದ ದಿನಸಿ ಕಿಟ್ ವಿತರಣೆ



■ ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ರಂಜಾನ್ ಹಬ್ಬದ ಅಂಗವಾಗಿ ಲೆಜೆಂಡ್ ಬ್ರದರ್ಸ್ ವತಿಯಿಂದ ಸ್ಥಳೀಯ ಶಾದಿ ಮಹಲ್‌ನಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಬಡ ಮುಸ್ಲಿಂ ಕುಟುಂಬಗಳಿಗೆ ಹಬ್ಬದ ದಿನಸಿ ಕಿಟ್ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಕೇಂದ್ರ ಕಾರಾಗೃಹದ ಅಧೀಕ್ಷಕ ಡಾ. ಐ.ಜೆ. ಮ್ಯಾಗೇರಿ ಮಾತನಾಡಿ, ರಂಜಾನ್ ಹಬ್ಬದಲ್ಲಿ ಯಾರೊಬ್ಬರೂ ಉಪವಾಸದಿಂದ ಸಂಕಷ್ಟ ಅನುಭವಿಸಬಾರದೆಂಬ ಉದ್ದೇಶದಿಂದ ಆಹಾರ ಕಿಟ್ ವಿತರಿಸುವ ಮೂಲಕ ಸಮಬಾಳು–ಸಮಪಾಲಿನ ತತ್ವ–ಕ್ಕೆ ಅರ್ಥ ನೀಡಲಾಗಿದೆ ಎಂದು ಹೇಳಿದರು.

ರಂಜಾನ್ ಹಬ್ಬದ ಸಂದರ್ಭದಲ್ಲಿ ಬಡವರಿಗೆ ಲೆಜೆಂಡ್ ಬ್ರದರ್ಸ್ ವತಿಯಿಂದ ಆಹಾರ ಕಿಟ್ ವಿತರಿಸಿರುವುದು ಶ್ಲಾಘನೀಯ ಕಾರ್ಯವಾಗಿದೆ.

ಪ್ರತಿಯೊಬ್ಬರೂ ತಮ್ಮ ದುಡಿಮೆಯ ಒಂದು ಭಾಗವನ್ನು ಜಕಾತ್ ರೂಪದಲ್ಲಿ ಬಡವರಿಗೆ ದಾನವಾಗಿ ನೀಡಬೇಕು. ಇದರಿಂದ ಬಡ ಕುಟುಂಬಗಳೂ ಹಬ್ಬದ ಸಡಗರದಲ್ಲಿ ಪಾಲ್ಗೊಳ್ಳಲು ಸಾಧ್ಯವಾಗುತ್ತದೆ ಎಂದು ಹೇಳಿದರು. ಪೈಗಂಬರ್ ಮಹಮ್ಮದ್ (ಸ್ವ.ಅ) ಅವರು ಮಹಿಳೆಯರಿಗೆ ಅತ್ಯಂತ ಗೌರವದ ಸ್ಥಾನವನ್ನು ನೀಡಿದ್ದರು ಎಂದರು.

ಹಿರಿಯ ನ್ಯಾಯವಾದಿ ಎಂ.ಎಸ್. ಹಡಪದ ಮಾತನಾಡಿ, ಡಿಜೆ ಸಾಂಗ್ ಹಾಕಿ ಬೈಕ್‌ಗಳ ಸೈಲೆನ್ಸರ್ ಕಿತ್ತು ಮೋಜು–ಮಸ್ತಿ ಮಾಡುವ ಕೆಲ ಯುವಕರಿಗೆ ಲೆಜೆಂಡ್ ಬ್ರದರ್ಸ್ ಮಾಡುತ್ತಿರುವ ಸಮಾಜಮುಖಿ ಕಾರ್ಯ ನಿಜಕ್ಕೂ ಮಾದರಿಯಾಗಿದೆ ಎಂದರು. ಇಂತಹ ಮಾನವೀಯ ಹಾಗೂ ಸಮಾಜಮುಖಿ ಕಾರ್ಯಗಳು ಹೆಚ್ಚಾದರೆ ಒಳ್ಳೆಯತನ ಬೆಳೆದು ಕೆಟ್ಟತನ ದೂರವಾಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ 70 ಬಡ ಮುಸ್ಲಿಂ ಕುಟುಂಬಗಳಿಗೆ ಹಬ್ಬದ ದಿನಸಿ ಕಿಟ್ ವಿತರಿಸಲಾಯಿತು. ಪುರಸಭೆ ಸದಸ್ಯ ರಾಜು ಸಾಂಗ್ಲಿಕರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿವರಾಜ್ ಘೋರ್ಪಡೆ, ಬಸವರಾಜ ಕೊಟಗಿ, ಎ.ಡಿ. ಕೋಲಕಾರ, ಎಂ.ವೈ. ಮುಧೋಳ, ಎಚ್.ಎಸ್. ಸೋಂಪೂರ ಸೇರಿದಂತೆ ಹಲವರು ಮಾತನಾಡಿದರು. ಕಾರ್ಯಕ್ರಮಕ್ಕೆ ಹಸನಸಾಬ ತಟಗಾರ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಎಂ.ಎಸ್. ಹಡಪದ, ಎಚ್.ಎಸ್. ಸೋಂಪೂರ, ಬಸವರಾಜ ಕೊಟಗಿ ಹಾಗೂ ಶಿವರಾಜ್ ಘೋರ್ಪಡೆ ಅವರನ್ನು ಲೆಜೆಂಡ್ ಬ್ರದರ್ಸ್ ವತಿಯಿಂದ ಸನ್ಮಾನಿಸಲಾಯಿತು.

ಟೆಕ್ಕೆದ ದರ್ಗಾದ ನಿಜಾಮುದ್ದೀನ್ ಶಾ ಮಕಾನದಾರ, ಖಲೀಲ್ ಅಹ್ಮದ್ ಖಾಜಿ, ಯಾಸೀನ್ ಮೌಲಾನಾ, ರಫೀಕ್ ಮೌಲಾನಾ, ಎಸ್.ವೈ. ಮುಧೋಳ, ಫಯಾಜ್ ತೋಟದ, ದಾವಲಸಾಬ ತಾಳಿಕೋಟಿ, ಲೆಜೆಂಡ್ ಬ್ರದರ್ಸ್ ಸಮಿತಿ ಅಧ್ಯಕ್ಷ ಅಲಿ ಸಾಗರ, ಅಸ್ಲಂ ಸಾಂಗ್ಲಿಕರ್, ಸದ್ದಾಂ ಯಲಬುರ್ಗಿ, ಪಾಶು ಗಂಗಾವತಿ, ಮೈಬು ಸುಂಕದ ಶರೀಫ್ ತಹಶೀಲ್ದಾರ, ಅಬ್ದುಲ್ ಮುಚ್ಚಾಲಿ, ಭಾಷಾಮೀಯಾ ತಹಶೀಲ್ದಾರ, ಆಸೀಫ್ ಸಾಂಗ್ಲಿಕರ್, ಆಸೀಫ್ ದ್ಯಾಂಪೂರ ಸೇರಿದಂತೆ ಸಮಾಜ ಭಾಂದವರು ಉಪಸ್ಥಿತರಿದ್ದರು.

> "ಪ್ರತಿಯೊಬ್ಬರೂ ತಮ್ಮ ದುಡಿಮೆಯ ಒಂದು ಭಾಗವನ್ನು ಜಕಾತ್ ರೂಪದಲ್ಲಿ ಬಡವರಿಗೆ ನೀಡಿದರೆ, ಸಮಾಜದಲ್ಲಿ ಆರ್ಥಿಕ ಸಮಾನತೆ ಹಾಗೂ ಸಹೋದರತ್ವ ಬಲವಾಗುತ್ತದೆ."
> – **ಡಾ. ಐ.ಜೆ. ಮ್ಯಾಗೇರಿ,** ಕೇಂದ್ರ ಕಾರಾಗೃಹ ಅಧೀಕ್ಷಕ.

**ಲೆಜೆಂಡ್ ಬ್ರದರ್ಸ್ ಸಮಾಜಮುಖಿ ಕಾರ್ಯ**

ರಂಜಾನ್ ಹಬ್ಬದ ಅಂಗವಾಗಿ ಲೆಜೆಂಡ್ ಬ್ರದರ್ಸ್ ವತಿಯಿಂದ 70 ಬಡ ಮುಸ್ಲಿಂ ಕುಟುಂಬಗಳಿಗೆ ದಿನಸಿ ಕಿಟ್ ವಿತರಿಸಲಾಯಿತು. ಸಮಾಜದಲ್ಲಿ ಬಡವರಿಗೂ ಹಬ್ಬದ ಸಂಭ್ರಮ ತಲುಪಿಸುವ ಉದ್ದೇಶದಿಂದ ಈ ಕಾರ್ಯ ಕೈಗೊಳ್ಳಲಾಗಿದೆ.



# ಅಣ್ಣಿಗೇರಿ ರೈಲ್ವೆ ನಿಲ್ದಾಣಕ್ಕೆ 'ಆದಿಕವಿ ಪಂಪ'ನ ಹೆಸರಿಡಲು ಆಗ್ರಹ




■ವಿಜಯಸಾಕ್ಷಿ ಸುದ್ದಿ, ಅಣ್ಣಿಗೇರಿ

ಧಾರವಾಡ ಜಿಲ್ಲೆಯ ಐತಿಹಾಸಿಕ ಪಟ್ಟಣವಾದ ಅಣ್ಣಿಗೇರಿ ರೈಲ್ವೆ ನಿಲ್ದಾಣಕ್ಕೆ ಕನ್ನಡದ ಆದಿಕವಿ ಪಂಪನ ಹೆಸರನ್ನು ನಾಮಕರಣ ಮಾಡಬೇಕೆಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಪುರುಷೋತ್ತಮ ಬಿಳಿಮಲೆ ಅವರು ಕೇಂದ್ರ ರೈಲ್ವೆ ಸಚಿವ ವಿ. ಸೋಮಣ್ಣ ಅವರಿಗೆ ಪತ್ರದ ಮೂಲಕ ಆಗ್ರಹಿಸಿದ್ದಾರೆ.

ಅಣ್ಣಿಗೇರಿ ನಗರವು ಆದಿಕವಿ ಪಂಪನ ಜನ್ಮಸ್ಥಳವಾಗಿದ್ದು, ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ವಿಶಿಷ್ಟ ಸ್ಥಾನ ಹೊಂದಿದೆ. ಇಂತಹ ಐತಿಹಾಸಿಕ ಮತ್ತು ಸಾಂಸ್ಕೃತಿಕ ಮಹತ್ವವಿರುವ ಪ್ರದೇಶದ ರೈಲ್ವೆ ನಿಲ್ದಾಣಕ್ಕೆ "ಆದಿಕವಿ ಪಂಪ ರೈಲ್ವೆ ನಿಲ್ದಾಣ" ಎಂದು ಹೆಸರಿಡುವುದು ಮಹಾಕವಿಗೆ ಸಲ್ಲಿಸುವ ಯೋಗ್ಯ ಗೌರವವಾಗುತ್ತದೆ ಎಂದು ಅವರು ತಿಳಿಸಿದ್ದಾರೆ.

ಈ ಮೂಲಕ ಕನ್ನಡ ಸಾಹಿತ್ಯದ ಸಮೃದ್ಧ ಪರಂಪರೆಗೆ ಗೌರವ ದೊರಕುವುದರ ಜೊತೆಗೆ ಅಣ್ಣಿಗೇರಿಯ ಐತಿಹಾಸಿಕ ಮತ್ತು ಸಾಂಸ್ಕೃತಿಕ ಮಹತ್ವ ದೇಶದಾದ್ಯಂತ ಪರಿಚಿತವಾಗಲಿದೆ. ಅಲ್ಲದೆ, ಸ್ಥಳೀಯ ಸಂಸ್ಕೃತಿ ಹಾಗೂ ಪ್ರವಾಸೋದ್ಯಮದ ಅಭಿವೃದ್ಧಿಗೂ ಇದು ಉತ್ತೇಜನ ನೀಡಲಿದೆ ಎಂದು ಅವರು ತಮ್ಮ ಪತ್ರದಲ್ಲಿ ವಿವರಿಸಿದ್ದಾರೆ.

ಕೇಂದ್ರ ಸರ್ಕಾರ ಹಾಗೂ ರೈಲ್ವೆ ಇಲಾಖೆ ಈ ಮನವಿಯನ್ನು ಗಂಭೀರವಾಗಿ ಪರಿಗಣಿಸಿ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಡಾ. ಬಿಳಿಮಲೆ ಅವರು ಮನವಿ ಮಾಡಿದ್ದಾರೆ.

ಹಿರೇಹಾಳದಲ್ಲಿ ಹಿರೇಮಠ ಉದ್ಘಾಟನೆ – ರೇಣುಕಾಚಾರ್ಯ ಮೂರ್ತಿ ಪ್ರತಿಷ್ಠಾಪನೆ, ಕಳಸಾರೋಹಣ ಭಕ್ತಿ ವೈಭವ

# ಸಮಾಜದ ದಿಕ್ಕು ತೋರಿಸುವುದು ಮಹಾನುಭಾವರ ಹೊಣೆ

■ವಿಜಯಸಾಕ್ಷಿ ಸುದ್ದಿ, ರೋಣ/ನರೇಗಲ್ಲ

ಆರೋಗ್ಯಪೂರ್ಣ ಹಾಗೂ ಸಾಂಸ್ಕೃತಿಕವಾಗಿ ಸದೃಢ ಸಮಾಜ ನಿರ್ಮಾಣಕ್ಕೆ ಆದರ್ಶ ಮೌಲ್ಯಗಳೇ ದಾರಿದೀಪವಾಗಿವೆ. ಧಾರ್ಮಿಕ ಮತ್ತು ಸಾಮಾಜಿಕ ಮೌಲ್ಯಗಳು ಕುಗ್ಗಿದರೆ ಧರ್ಮ–ಸಂಸ್ಕೃತಿ ಉಳಿಯುವುದಿಲ್ಲ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಪೀಠದ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ರೋಣ ತಾಲೂಕಿನ ಹಿರೇಹಾಳ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿದ ಹಿರೇಮಠದ ಉದ್ಘಾಟನೆ, ಶ್ರೀ ಜಗದ್ಗುರು ರೇಣುಕಾಚಾರ್ಯ ಮೂರ್ತಿ ಪ್ರತಿಷ್ಠಾಪನೆ ಹಾಗೂ ಕಳಸಾರೋಹಣ ಅಂಗವಾಗಿ ನಡೆದ ಧರ್ಮ ಜಾಗೃತಿ ಸಮಾರಂಭದಲ್ಲಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು, ದೇವಾಲಯಗಳು ಮತ್ತು ಮಠಗಳು ಧರ್ಮ–ಸಂಸ್ಕೃತಿಯ ಪ್ರತೀಕವಾಗಿದ್ದು, ಮಾನವನಿಗೆ ಶಾಂತಿ ಮತ್ತು ನೆಮ್ಮದಿ ನೀಡುವ ಆಧ್ಯಾತ್ಮಿಕ ಕೇಂದ್ರಗಳಾಗಿವೆ ಎಂದರು.



ಬದುಕಿನ ವಿಕಾಸಕ್ಕೆ ಆಧ್ಯಾತ್ಮಿಕ ಜ್ಞಾನ ಹಾಗೂ ಶ್ರೇಷ್ಠ ಆಚರಣೆಗಳು ಅವಶ್ಯಕ. ಮನುಷ್ಯನಲ್ಲಿ ಆತ್ಮಬಲ ಹೆಚ್ಚಲು ಆಧ್ಯಾತ್ಮದ ಅರಿವು ಮತ್ತು ಆಸಕ್ತಿ ಅಗತ್ಯವಾಗಿದೆ ಎಂದು ಹೇಳಿದರು.

ಶ್ರೀ ಜಗದ್ಗುರು ರೇಣುಕಾಚಾರ್ಯರು ಬೋಧಿಸಿದ ವಿಶ್ವಬಂಧುತ್ವ ಹಾಗೂ ಅಹಿಂಸೆಯಿಂದ ಧ್ಯಾನವರೆಗೆ ಇರುವ ದಶಧರ್ಮ ಸೂತ್ರಗಳು ಮಾನವ ಜೀವನಕ್ಕೆ ದಾರಿದೀಪವಾಗಿವೆ.

ಹಿರೇಹಾಳು ಗ್ರಾಮದಲ್ಲಿ ರಂಭಾಪುರಿ ಪೀಠದ ಶಾಖಾಮಠದಲ್ಲಿ ನೂತನ ಕಟ್ಟಡ ನಿರ್ಮಿಸಿ ಮೂರ್ತಿ ಪ್ರತಿಷ್ಠಾಪನೆ ಹಾಗೂ ಕಳಸಾರೋಹಣ ನೆರವೇರಿಸಿರುವುದು ಸಂತೋಷದ ವಿಷಯ ಎಂದರು.

ಈ ಸಂದರ್ಭದಲ್ಲಿ ಬೇನಾಳ ಹಿರೇಮಠದ ಸದಾಶಿವ ಶಿವಾಚಾರ್ಯರು, ಸೂಡಿ ಜುಕ್ತಿ ಹಿರೇಮಠದ ಡಾ. ಕೊಟ್ಟೂರು ಬಸವೇಶ್ವರ ಶಿವಾಚಾರ್ಯರು, ಚಳಗೇರಿ ಹಿರೇಮಠದ ವೀರಸಂಗಮೇಶ್ವರ ಶಿವಾಚಾರ್ಯರು, ಯಲಬುರ್ಗಾ ಹಿರೇಮಠದ ಬಸವಲಿಂಗೇಶ್ವರ ಶಿವಾಚಾರ್ಯರು, ವೀರೇಶ್ವರ ಪುಣ್ಯಾಶ್ರಮದ ಕಲ್ಲಯ್ಯಜ್ಜನವರು ಹಾಗೂ ಲಿಂಗಸುಗೂರಿನ ಮಾತಾ ಮಾಣಿಕ್ಕೇಶ್ವರಿ ಆಶ್ರಮದ ನಂದೀಶ್ವರಿ ಅಮ್ಮನವರು ಉಪಸ್ಥಿತರಿದ್ದರು.

ಕಾರ್ಯಕ್ರಮಕ್ಕೂ ಮುನ್ನ ರಂಭಾಪುರಿ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವ ಭಕ್ತಿಭಾವದಿಂದ ಜರುಗಿದ್ದು, ಸಹಸ್ರಾರು ಭಕ್ತರು ಪಾಲ್ಗೊಂಡು ಆಶೀರ್ವಾದ ಪಡೆದರು.

> "ಧಾರ್ಮಿಕ ಮತ್ತು ಸಾಮಾಜಿಕ ಮೌಲ್ಯಗಳು ಕಣ್ಮರೆಯಾದರೆ ಧರ್ಮ–ಸಂಸ್ಕೃತಿ ಉಳಿಯುವುದಿಲ್ಲ; ಆಧ್ಯಾತ್ಮವೇ ಮಾನವನ ಆತ್ಮಬಲಕ್ಕೆ ಮೂಲ".
> – ಡಾ. ವೀರಸೋಮೇಶ್ವರ ಜಗದ್ಗುರು

**ನಿಡಗುಂದಿಯಲ್ಲಿ ವೀರಭದ್ರೇಶ್ವರ ಶಿಲಾಮಂದಿರಕ್ಕೆ ಶಿಲಾನ್ಯಾಸ**

ಇದೇ ಸಂದರ್ಭದಲ್ಲಿ ಗಜೇಂದ್ರಗಡ ತಾಲೂಕಿನ ನಿಡಗುಂದಿ ಗ್ರಾಮದಲ್ಲಿ ಶ್ರೀ ವೀರಭದ್ರೇಶ್ವರ ನೂತನ ಶಿಲಾ ದೇವಾಲಯ ನಿರ್ಮಾಣಕ್ಕೆ ಜಗದ್ಗುರುಗಳು ಭೂಮಿಪೂಜೆ ನೆರವೇರಿಸಿ ಶಿಲಾನ್ಯಾಸ ಮಾಡಿದರು.

ಸಮಾರಂಭದಲ್ಲಿ ನರೇಗಲ್ಲ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು, ನಿಡಗುಂದಿಕೊಪ್ಪದ ಅಭಿನವ ಚನ್ನಬಸವ ಸ್ವಾಮಿಗಳು, ರೋಣ ಬೂದೀಶ್ವರ ಮಠದ ವಿಶ್ವನಾಥ ದೇವರು ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು. ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರು ಹಾಗೂ ಶಾಸಕ ಜಿ.ಎಸ್. ಪಾಟೀಲ ದೇವಸ್ಥಾನ ನಿರ್ಮಾಣಕ್ಕೆ ಸಹಕಾರ ನೀಡುವುದಾಗಿ ತಿಳಿಸಿದ್ದಾರೆ.

# ಮೆಡಿಟೇಷನ್ ಕೇಂದ್ರದಲ್ಲಿ ಕೆ. ವೆಂಕಟರತ್ನಮ್ಮನವರ 80ನೇ ಹುಟ್ಟುಹಬ್ಬ ಆಚರಣೆ



■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಸಂಬಾಪೂರ ರಸ್ತೆಯಲ್ಲಿರುವ ಶ್ರೀ ರಾಮಚಂದ್ರ ಮಿಶನ್ ಸಂಸ್ಥೆಯ ಹಾರ್ಟ್ಫುಲ್‌ನೆಸ್ ಮೆಡಿಟೇಷನ್ ಕೇಂದ್ರದಲ್ಲಿ ಶ್ರೀಮತಿ ಕೆ. ವೆಂಕಟರತ್ನಮ್ಮ ಅವರ 80ನೇ ಹುಟ್ಟುಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು.

ಮೆಡಿಟೇಷನ್ ಕೇಂದ್ರದ ಗದಗ ಶಾಖೆಯ ಸಂಚಾಲಕಿ ನಾಗಲತಾ ವಡವಡಗಿ ಅವರ ತಾಯಿ ಶ್ರೀಮತಿ ಕೆ. ವೆಂಕಟರತ್ನಮ್ಮ ಈ ಸಂದರ್ಭದಲ್ಲಿ ನಡೆದ ಸತ್ಸಂಗದಲ್ಲಿ ಭಾಗವಹಿಸಿದರು. ಕಾರ್ಯಕ್ರಮದ ಆರಂಭದಲ್ಲಿ ಅಭ್ಯಾಸಿಗಳು ಎಂದಿನಂತೆ ಒಂದು ಗಂಟೆಯ ಧ್ಯಾನ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಬಳಿಕ ವಿನಾಯಕ ಹೆಬಸೂರ ಅವರು ಸನ್ಮಾನ್ಯ ದಾಜಿ ಅವರ ಶುಭಾಷಿತದ ನುಡಿಗಳನ್ನು ವಾಚಿಸಿದರು. ನಂತರ ನಡೆದ ಕಾರ್ಯಕ್ರಮದಲ್ಲಿ ಶ್ರೀಮತಿ ವೆಂಕಟರತ್ನಮ್ಮ ಅವರ 80ನೇ ಜನ್ಮದಿನವನ್ನು ವಿಶೇಷವಾಗಿ ಆಚರಿಸಿ, ಮೆಡಿಟೇಷನ್ ಕೇಂದ್ರದ ಪರವಾಗಿ ಸನ್ಮಾನಿಸಿ ಶುಭಾಶಯಗಳನ್ನು ಕೋರಲಾಯಿತು. ಈ ವೇಳೆ ಮಾತನಾಡಿದ ನಾಗಲತಾ ವಡವಡಗಿ, ತಮ್ಮ ತಾಯಿ ನಾಲ್ಕು ಹೆಣ್ಣುಮಕ್ಕಳು ಮತ್ತು ಒಬ್ಬ ಮಗನನ್ನು ಬೆಳೆಸಿ ಎಲ್ಲರಿಗೂ ಉತ್ತಮ ಶಿಕ್ಷಣ ನೀಡಲು ಅಪಾರ ಶ್ರಮಪಟ್ಟಿದ್ದಾರೆ ಎಂದು ಸ್ಮರಿಸಿದರು. ಅವರ ತ್ಯಾಗದ ಫಲವಾಗಿ ಕುಟುಂಬದ ಎಲ್ಲರೂ ಉತ್ತಮ ಜೀವನ ನಡೆಸುತ್ತಿದ್ದಾರೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಪ್ರೋ. ಎಂ.ಸಿ. ವಗ್ಗಿ, ವೆಂಕಟರತ್ನಮ್ಮ ಅವರ 80ನೇ ವರ್ಷದ ಹುಟ್ಟುಹಬ್ಬವನ್ನು ಮೆಡಿಟೇಷನ್ ಕೇಂದ್ರದಲ್ಲಿ ಆಚರಿಸುವುದು ಸಂತೋಷದ ಸಂಗತಿಯಾಗಿದೆ ಎಂದು ಹೇಳಿದರು. ಅವರಿಗೆ ದೇವರು ಸುಖ, ಶಾಂತಿ, ನೆಮ್ಮದಿ ಹಾಗೂ ಆಯುರಾರೋಗ್ಯ ನೀಡಲಿ ಎಂದು ಹಾರೈಸಿದರು.

ಹುಟ್ಟುಹಬ್ಬ ಕಾರ್ಯಕ್ರಮದಲ್ಲಿ ಮಂಜುನಾಥ ಹಡಪದ, ಸುವರ್ಣಾ ಮಾಳಗಿಮನಿ, ಅಶೋಕ ಕೊಡಗಲಿ ಸೇರಿದಂತೆ ಅನೇಕ ಸಾಧಕರು ಸಂದರ್ಭೋಚಿತವಾಗಿ ಮಾತನಾಡಿ ಶುಭಾಶಯಗಳನ್ನು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ವಿಶ್ವನಾಥ ಗಡ್ಡದ, ಆರ್.ಟಿ. ನಾರಾಯಣಪೂರ, ನವೀನಕುಮಾರ ಹೆಬಸೂರ, ಉದಯ ಲದ್ವಾ, ಹೇಮಾವತಿ ನಿರಂಜನ, ಲಲಿತಾ ಹುಣಶೀಮರದ, ರೂಪಾ ಲದ್ವಾ, ಹೇಮಾ ಹುಯಿಲಗೋಳ ಸೇರಿದಂತೆ ಅನೇಕರು ಭಾಗವಹಿಸಿದ್ದರು.

186 ಪ್ರಕರಣಗಳು ಇತ್ಯರ್ಥ – 5.97 ಕೋಟಿ ಪರಿಹಾರ ನಿಗದಿ

# ಹೈಕೋರ್ಟ್ ಪೀಠದಲ್ಲಿ ರಾಷ್ಟ್ರೀಯ ಲೋಕ ಅದಾಲತ್ ಯಶಸ್ವಿ

■ವಿಜಯಸಾಕ್ಷಿ ಸುದ್ದಿ, ಧಾರವಾಡ

ಕರ್ನಾಟಕ ಉಚ್ಚ ನ್ಯಾಯಾಲಯದ ಧಾರವಾಡ ಪೀಠದಲ್ಲಿ ಈ ವರ್ಷದ ಮೊದಲ ರಾಷ್ಟ್ರೀಯ ಲೋಕ ಅದಾಲತ್ ಶನಿವಾರ ಯಶಸ್ವಿಯಾಗಿ ನಡೆಯಿತು. ಹಿರಿಯ ನ್ಯಾಯಮೂರ್ತಿ ಬಿ.ಎಂ. ಶ್ಯಾಮ ಪ್ರಸಾದ್ ಅವರ ನೇತೃತ್ವದಲ್ಲಿ ಅದಾಲತ್ ಆಯೋಜಿಸಲಾಗಿತ್ತು.

ನ್ಯಾಯಮೂರ್ತಿಗಳಾದ ಅಶೋಕ ಎಸ್. ಕಿಣಗಿ, ರವಿ ಎಸ್. ಹೊಸಮನಿ ಹಾಗೂ ಗೀತಾ ಕೆ.ಬಿ. ಅವರೊಂದಿಗೆ ಲೋಕ ಅದಾಲತ್ ಸದಸ್ಯರಾದ ಕೆ.ಎಲ್. ಪಾಟೀಲ, ಹರ್ಷ ದೇಸಾಯಿ ಮತ್ತು ಎಸ್.ಎಚ್. ಮಿತ್ತಲಕೋಡ ಸೇರಿ ಒಟ್ಟು ಮೂರು ಪೀಠಗಳನ್ನು ರಚಿಸಲಾಗಿತ್ತು.

ಒಟ್ಟು 807 ಪ್ರಕರಣಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಗಿದ್ದು, ಅವುಗಳಲ್ಲಿ 186 ಪ್ರಕರಣಗಳು ಪರಸ್ಪರ ಸಮಾಧಾನದ ಮೂಲಕ ಇತ್ಯರ್ಥಗೊಂಡಿವೆ. ಇವುಗಳ ಮೂಲಕ 5,97,95,388 ಮೊತ್ತದ ಪರಿಹಾರ ನಿಗದಿಪಡಿಸಲಾಗಿದೆ.

ಅಪಘಾತ ಪರಿಹಾರ, ಸಿವಿಲ್ ಹಾಗೂ ರಿಟ್ ಅರ್ಜಿಗಳು ಸೇರಿದಂತೆ ವಿವಿಧ ವಿಧದ ಪ್ರಕರಣಗಳನ್ನು ಲೋಕ ಅದಾಲತ್‌ನಲ್ಲಿ ಸೌಹಾರ್ದಯುತವಾಗಿ ಇತ್ಯರ್ಥಗೊಳಿಸಲಾಯಿತು. ಇದರಿಂದ ಪಕ್ಷಗಾರರ ನಡುವಿನ ಸಂಬಂಧಗಳು ಕಾಪಾಡಿಕೊಳ್ಳುವುದರೊಂದಿಗೆ, ವೇಗವಾಗಿ ಮತ್ತು ಸರಳವಾಗಿ ನ್ಯಾಯ ದೊರಕುವ ವ್ಯವಸ್ಥೆಗೆ ಉತ್ತೇಜನ ದೊರೆತಿದೆ.

'ಎಲ್ಲರಿಗೂ ನ್ಯಾಯ' ಎಂಬ ಧ್ಯೇಯವನ್ನು ಸಾಧಿಸುವಲ್ಲಿ ರಾಷ್ಟ್ರೀಯ ಲೋಕ ಅದಾಲತ್ ಮಹತ್ವದ ಪಾತ್ರವಹಿಸುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



# ಸಾಹಿತಿ ಡಾ. ಸಂಗಮೇಶ ತಮ್ಮನಗೌಡ್ರಗೆ 'ಗಳಗನಾಥ ಅಕ್ಷರಶ್ರೀ' ಪುರಸ್ಕಾರ



■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಖ್ಯಾತ ಸಾಹಿತಿ ಡಾ. ಸಂಗಮೇಶ ತಮ್ಮನಗೌಡ್ರ ಅವರಿಗೆ ಅಕ್ಷರ ಚಪ್ಪರ ಸಂಸ್ಥೆಯ ವತಿಯಿಂದ ನೀಡಲಾಗುವ ಪ್ರತಿಷ್ಠಿತ 'ಗಳಗನಾಥ ಅಕ್ಷರಶ್ರೀ' ಪುರಸ್ಕಾರ ಪ್ರದಾನ ಮಾಡಲಾಗಿದೆ. ನಗರದ ಶೇಷಾದ್ರಿಪುರಂನ ಗಾಂಧಿ ಭವನದಲ್ಲಿರುವ ಕಸ್ತೂರಬಾ ಸಭಾಂಗಣದಲ್ಲಿ ಭಾನುವಾರ ನಡೆದ ಸಮಾರಂಭದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಪುರಸ್ಕಾರ ಸ್ವೀಕರಿಸಿ ಮಾತನಾಡಿದ ಡಾ. ಸಂಗಮೇಶ ತಮ್ಮನಗೌಡ್ರ, ಹಾವೇರಿ ಜಿಲ್ಲೆಯ ಗಳಗನಾಥ ಗ್ರಾಮದ ಖ್ಯಾತ ಸಾಹಿತಿ ಗಳಗನಾಥ ತಮ್ಮ ಸಾಹಿತ್ಯ ಬದುಕಿಗೆ ಮಹತ್ವದ ಪ್ರೇರಣೆಯಾಗಿದ್ದಾರೆ ಎಂದು ಹೇಳಿದರು. ಆಧುನಿಕ ಮುದ್ರಣ ಸೌಲಭ್ಯಗಳಿಲ್ಲದ ಕಾಲದಲ್ಲಿಯೇ ಪುಸ್ತಕಗಳನ್ನು ಮುದ್ರಿಸಿ ಮನೆಮನೆಗೆ ತಲುಪಿಸಿದ ಅವರ ತ್ಯಾಗ ಮತ್ತು ಸಾಹಿತ್ಯ ಸೇವೆ ತಮ್ಮಗೆ ಮಾದರಿಯಾಗಿದೆ ಎಂದು ಅವರು ಸ್ಮರಿಸಿದರು.


ತಾವು 1989ರಿಂದ ಕಥೆ, ಕವನ, ಕಾದಂಬರಿ, ನಾಟಕ, ಸಾಹಿತ್ಯ ವಿಮರ್ಶೆ, ಆತ್ಮಕಥನ, ಪ್ರವಾಸ ಸಾಹಿತ್ಯ ಹಾಗೂ ಜನಪದ ಸಾಹಿತ್ಯ ಸೇರಿದಂತೆ 13 ಸಾಹಿತ್ಯ ಪ್ರಕಾರಗಳಲ್ಲಿ ಬರವಣಿಗೆ ನಡೆಸಿದ್ದು, ಇದುವರೆಗೆ 115 ಕೃತಿಗಳನ್ನು ರಚಿಸಿರುವುದಾಗಿ ತಿಳಿಸಿದರು. 1991ರಿಂದ ಕರ್ನಾಟಕ ಹಾಗೂ ಹೊರರಾಜ್ಯಗಳ ಶಾಲೆ–ಕಾಲೇಜು ವಿದ್ಯಾರ್ಥಿಗಳು ಮತ್ತು ಓದುಗರ ಮನೆಮನೆಗೆ ತೆರಳಿ ಪುಸ್ತಕಗಳನ್ನು ರಿಯಾಯಿತಿ ದರದಲ್ಲಿ ವಿತರಿಸುತ್ತಿರುವುದಾಗಿ ಹೇಳಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಬಿಎಂಶ್ರೀ ಪ್ರತಿಷ್ಠಾನದ ಅಧ್ಯಕ್ಷ ಡಾ. ಭೈರಮಂಗಲ ರಾಮೇಗೌಡ, ಅಕ್ಷರ ಚಪ್ಪರ ಸಂಸ್ಥೆ ಯೋಗ್ಯರನ್ನು ಗುರುತಿಸಿ ಈ ಪುರಸ್ಕಾರ ನೀಡುತ್ತಿರುವುದು ಶ್ಲಾಘನೀಯವಾಗಿದೆ ಎಂದು ಅಭಿಪ್ರಾಯಪಟ್ಟರು. ಡಾ. ಸಂಗಮೇಶ ತಮ್ಮನಗೌಡ್ರ ಅವರ ಸಾಹಿತ್ಯ ಸೇವೆ ಇನ್ನಷ್ಟು ವಿಸ್ತರಿಸಲಿ ಎಂದು ಹಾರೈಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಭೈರಮಂಗಲ ರಾಮೇಗೌಡ ವಹಿಸಿದ್ದರು. ಈ ಸಂದರ್ಭದಲ್ಲಿ ಸಾಹಿತಿಗಳಾದ ಡಾ. ವಿಜಯಲಕ್ಷ್ಮೀ, ಡಾ. ಜಿ. ಶಿವಣ್ಣ, ಅಕ್ಷರ ಚಪ್ಪರದ ಅಧ್ಯಕ್ಷೆ ಮಧು ಅಕ್ಷರಿ, ಸಂಸ್ಥಾಪಕ ಆರ್. ಶ್ರೀ ನಾಗೇಶ್, ತಿಪ್ಪೀರಮ್ಮ ಸಕಲಾಪುರದಹಟ್ಟಿ, ರೇಣುಕ ವೈಕುಂಠಯ್ಯ, ಬರಹಗಾರ್ತಿ ಪಂಕಜಾ ಗೊರೂರ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

ಯುಗಾದಿ ಬಳಿಕ ನೂತನ ಪದಾಧಿಕಾರಿಗಳ ಘೋಷಣೆ । ಯುವಕರಿಗೆ, ಮಹಿಳೆಯರಿಗೆ ಸ್ಪರ್ಧೆಗೆ ಆದ್ಯತೆ!

# ರಾಣಿ ಚೆನ್ನಮ್ಮ ಪಾರ್ಟಿ ಶಿಸ್ತಿನ ಪಕ್ಷ : ಎಂ.ಬಿ. ದೇಸಾಯಿ



> "ತತ್ವ–ಸಿದ್ಧಾಂತಗಳ ಆಧಾರದ ಮೇಲೆ ರಾಣಿ ಚೆನ್ನಮ್ಮ ಪಾರ್ಟಿಯನ್ನು ಕಟ್ಟುತ್ತಿದ್ದು, ಶಿಸ್ತಿಗೆ ಹೆಚ್ಚು ಒತ್ತು ನೀಡಲಾಗಿದೆ."
> – ಎಂ.ಬಿ. ದೇಸಾಯಿ, ಅಧ್ಯಕ್ಷರು, ರಾಣಿ ಚೆನ್ನಮ್ಮ ಪಾರ್ಟಿ.

■ವಿಜಯಸಾಕ್ಷಿ ಸುದ್ದಿ, ಗದಗ

ತತ್ವ–ಸಿದ್ಧಾಂತಗಳ ತಳಹದಿಯ ಮೇಲೆ ಪ್ರಾದೇಶಿಕ ರಾಜಕೀಯ ಪಕ್ಷವಾದ ರಾಣಿ ಚೆನ್ನಮ್ಮ ಪಾರ್ಟಿ ಸ್ಥಾಪನೆಯಾಗಿದ್ದು, ಪಕ್ಷದಲ್ಲಿ ಶಿಸ್ತಿಗೆ ಹೆಚ್ಚಿನ ಮಹತ್ವ ನೀಡಲಾಗಿದೆ ಎಂದು ಪಕ್ಷದ ಸಂಸ್ಥಾಪಕ ಅಧ್ಯಕ್ಷ ಎಂ.ಬಿ. ದೇಸಾಯಿ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಪಕ್ಷದ ಕೆಲವು ಪದಾಧಿಕಾರಿಗಳು ಪಕ್ಷ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿರುವ ಕಾರಣ ಅವರನ್ನು ಪಕ್ಷದಿಂದ ಉಚ್ಚಾಟಿಸಲಾಗಿದೆ ಎಂದು ತಿಳಿಸಿದ್ದಾರೆ. ಯುಗಾದಿ ಹಬ್ಬದ ಬಳಿಕ ರಾಜ್ಯ, ಜಿಲ್ಲಾ ಹಾಗೂ ತಾಲೂಕು ಘಟಕಗಳ ನೂತನ ಪದಾಧಿಕಾರಿಗಳನ್ನು ಘೋಷಿಸಲಾಗುವುದು ಎಂದು ಹೇಳಿದ್ದಾರೆ.

ಪಕ್ಷಕ್ಕೆ ನಿಷ್ಠೆಯಿಂದ ಕಾರ್ಯನಿರ್ವಹಿಸುವ ಹಾಗೂ ಕ್ರಿಯಾಶೀಲ ಕಾರ್ಯಕರ್ತರಿಗೆ ಪ್ರಮುಖ ಜವಾಬ್ದಾರಿಗಳನ್ನು ನೀಡಲಾಗುವುದು. ಬರಲಿರುವ ಚುನಾವಣೆಗೆ ಹಲವಾರು ಅಭ್ಯರ್ಥಿಗಳು ಉತ್ಸಾಹದಿಂದ ಮುಂದೆ ಬಂದಿದ್ದು, ಪಕ್ಷದ ಪದಾಧಿಕಾರಿಗಳೊಂದಿಗೆ ಚರ್ಚಿಸಿ ಸೂಕ್ತ ಅಭ್ಯರ್ಥಿಗಳನ್ನು ಚುನಾವಣಾ ಕಣಕ್ಕಿಳಿಸಲಾಗುವುದು ಎಂದರು.

ಬರುವ ತಾಲೂಕು, ಜಿಲ್ಲಾ ಪಂಚಾಯತ್, ಸ್ಥಳೀಯ ಸಂಸ್ಥೆಗಳು ಹಾಗೂ ಗ್ರೇಟರ್ ಬೆಂಗಳೂರು ಚುನಾವಣೆಯಲ್ಲಿ ರಾಷ್ಟ್ರೀಯ ಪಕ್ಷಗಳ ವಿರುದ್ಧ ರಾಣಿ ಚೆನ್ನಮ್ಮ ಪಾರ್ಟಿ ತೀವ್ರ ಸ್ಪರ್ಧೆ ನಡೆಸಲಿದೆ ಎಂದು ತಿಳಿಸಿದ್ದಾರೆ.

ಪಕ್ಷದಿಂದ ಚುನಾವಣೆಗೆ ಸ್ಪರ್ಧಿಸಲು ಯುವಕರು ಮತ್ತು ಯುವತಿಯರಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು. ಯುವ ಪೀಳಿಗೆಯನ್ನು ರಾಜಕೀಯದಲ್ಲಿ ಸಕ್ರಿಯಗೊಳಿಸುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ. ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಸ್ಪರ್ಧಿಸಲು ಮುಕ್ತ ಅವಕಾಶವಿದೆ. ಆಸಕ್ತರು ಪಕ್ಷದ ಮುಖ್ಯಸ್ಥರನ್ನು 9980383723 / 7676997444 ಸಂಖ್ಯೆಗಳ ಮೂಲಕ ಸಂಪರ್ಕಿಸಬಹುದು ಎಂದು ಎಂ.ಬಿ. ದೇಸಾಯಿ ತಿಳಿಸಿದ್ದಾರೆ.

ಗೌರವಧನ ಹೆಚ್ಚಳದಿಂದ ಗ್ರಾಚ್ಯುಟಿ ಬಿಡುಗಡೆವರೆಗೆ ವಿವಿಧ ಬೇಡಿಕೆಗಳ ಒತ್ತಾಯಿಸಿ ಮನವಿ

# ಸಮಸ್ಯೆಗಳ ಪರಿಹಾರಕ್ಕೆ ಅಂಗನವಾಡಿ ಕಾರ್ಯಕರ್ತೆಯರ ಪ್ರತಿಭಟನೆ



■ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ

ಹಗರಿಬೊಮ್ಮನಹಳ್ಳಿ ಪಟ್ಟಣದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಿದರು. ಈಶ್ವರ ದೇವಸ್ಥಾನದಿಂದ ಶಾಸಕರ ಮನೆವರೆಗೆ ಮೆರವಣಿಗೆ ನಡೆಸಿ, ಶಾಸಕ ಕೆ. ನೇಮಿರಾಜ ನಾಯ್ಕ ಅವರಿಗೆ ಮನವಿ ಸಲ್ಲಿಸಲು ಮುಂದಾದರು. ಶಾಸಕರು ಗೈರಾಗಿದ್ದರಿಂದ, ಅವರ ಪರವಾಗಿ ಶ್ರೀಮತಿ ಕೆ. ವಾಣಿಶ್ರೀ ನೇಮಿರಾಜ ನಾಯ್ಕ ಮನವಿಯನ್ನು ಸ್ವೀಕರಿಸಿದರು.

> "ನಿಮ್ಮ ಸಮಸ್ಯೆಗಳನ್ನು ಶಾಸಕರ ಗಮನಕ್ಕೆ ತಂದು ಪರಿಹಾರಕ್ಕೆ ಕ್ರಮ ಕೈಗೊಳ್ಳುತ್ತೇವೆ"
> – ಕೆ. ವಾಣಿಶ್ರೀ ನೇಮಿರಾಜ ನಾಯ್ಕ

ಅಂಗನವಾಡಿ ನೌಕರರ ಸಂಘ ಹಾಗೂ CITU ಸಂಘದ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಸಂಘದ ಅಧ್ಯಕ್ಷೆ ಜೆ.ಎಂ. ಜ್ಯೋತಿಶ್ವರಿ ಮನವಿಯನ್ನು ವಾಚಿಸಿ ಬೇಡಿಕೆಗಳನ್ನು ಮಂಡಿಸಿದರು.

ಕಾರ್ಯಕರ್ತೆಯರು ಅಂಗನವಾಡಿ ನೌಕರರ ಗೌರವಧನ ಹೆಚ್ಚಳ, ಐಎಲು ಮತ್ತು UKG ತರಗತಿಗಳ ಪ್ರಾರಂಭ, ಕನಿಷ್ಠ ಕೂಲಿ ಕಾಯ್ದೆಯ ವ್ಯಾಪ್ತಿಗೆ ಒಳಪಡಿಸುವುದು ಹಾಗೂ ESF, PF ಸೌಲಭ್ಯಗಳನ್ನು ಒದಗಿಸುವಂತೆ ಒತ್ತಾಯಿಸಿದರು. ಅಂಗನವಾಡಿ ಕೇಂದ್ರಗಳಿಗೆ ಸರಬರಾಜಾಗುವ ಆಹಾರ ಪದಾರ್ಥಗಳ ಗುಣಮಟ್ಟ ಕಳಪೆಯಾಗಿರುವ ಹಿನ್ನೆಲೆ BS ಪರವಾನಿಗೆ ರದ್ದುಪಡಿಸಿ, ಸ್ಥಳೀಯ ಆಹಾರ ಪೂರೈಕೆ ವ್ಯವಸ್ಥೆ ಜಾರಿಗೆ ತರಬೇಕೆಂದು ಆಗ್ರಹಿಸಿದರು.

2011ರಿಂದ 2023ರ ಮಾರ್ಚ್ ತನಕ ನಿವೃತ್ತರಾದ ಕಾರ್ಯಕರ್ತರು ಮತ್ತು ಸಹಾಯಕಿಯರಿಗೆ 183 ಕೋಟಿ ಗ್ರಾಚ್ಯುಟಿ ಹಣವನ್ನು ತಕ್ಷಣ ಬಿಡುಗಡೆ ಮಾಡಬೇಕು. ಜೊತೆಗೆ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವುದು, ಮೊಟ್ಟೆ, ಬಾಡಿಗೆ, ಗ್ಯಾಸ್, ತರಕಾರಿ ಹಾಗೂ ಆಡಳಿತ ವೆಚ್ಚಗಳಿಗೆ ಸಮರ್ಪಕ ಅನುದಾನ ನೀಡುವುದು, ಸಾಮೂಹಿಕ ಆರೋಗ್ಯ ವಿಮೆ ಜಾರಿಗೊಳಿಸುವುದು ಸೇರಿದಂತೆ ಹಲವು ಬೇಡಿಕೆಗಳನ್ನು ಮುಂದಿಟ್ಟರು.

ಅಂಗನವಾಡಿ ಕೇಂದ್ರಗಳಿಗೆ ಗುಣಮಟ್ಟದ ಮೊಬೈಲ್ ಮತ್ತು ವೈಫೈ ಸೌಲಭ್ಯ ಒದಗಿಸಬೇಕು. ರಾಜ್ಯ ಸರ್ಕಾರ ಹಾಗೂ ಖಾಸಗಿ ವಲಯದ ಮಹಿಳೆಯರಿಗೆ ಇರುವ ಮುಟ್ಟಿನ ರಜೆ ಸೌಲಭ್ಯವನ್ನು ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗೂ ವಿಸ್ತರಿಸಬೇಕು ಎಂದು ಒತ್ತಾಯಿಸಿದರು. ಹಗರಿಬೊಮ್ಮನಹಳ್ಳಿ ತಾಲೂಕಿನ ಎಲ್ಲಾ ಅಂಗನವಾಡಿ ಕಾರ್ಯಕರ್ತೆಯರು ಪ್ರತಿಭಟನೆಯಲ್ಲಿ ಭಾಗವಹಿಸಿ ತಮ್ಮ ಒಗ್ಗಟ್ಟನ್ನು ತೋರಿಸಿದರು.

ಈ ಸಂದರ್ಭದಲ್ಲಿ ಪ್ರಧಾನ ಕಾರ್ಯದರ್ಶಿ ಮಾರೆಕ, ಮಾಬೂನಿ, ಕಸ್ತೂರಿ, ಪುಷ್ಪಾವತಿ, ಸುಮಂಗಲ, ಯಶೋಧ, ಸವಿತಾ, ಸಂಗೀತಾ, ಮೀನಾಕ್ಷಿ, ಜ್ಯೋತಿ, ಅಂದಮ್ಮ, ಕರಿಬಸಮ್ಮ, ಕೊಟ್ಟಿಗೆ ಮಲ್ಲಿಕಾರ್ಜುನ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಮಾ.18ರಿಂದ ಮಾರುತಿ ದೇವಸ್ಥಾನದ ಜಾತ್ರೆ: 25ನೇ ವರ್ಷದ ಸಂಭ್ರಮ!

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ ಬಸ್ತಿಬಣದಲ್ಲಿರುವ ಮಾರುತಿ ದೇವಸ್ಥಾನದ ಜಾತ್ರೆಯು ದಿ. ಪ್ರಭಣ್ಣನವರು ಓದುನವರ ಇವರ ಮಾರ್ಗದರ್ಶನದಂತೆ ಕಳೆದ 25 ವರ್ಷಗಳಿಂದ ನಿರಂತರವಾಗಿ ನಡೆಯುತ್ತಿದ್ದು, ಈ ವರ್ಷವೂ ದಿ. 18ರಂದು ಬುಧವಾರದಿಂದ ಆರಂಭವಾಗಲಿದೆ.


ಶ್ರೀ ಮಾರುತಿ ದೇವಸ್ಥಾನದ ರಥೋತ್ಸವವು ಕರೆವಡಿಮಠದ ಶ್ರೀ ಮಳೇಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳ ದಿವ್ಯಸಾನಿಧ್ಯದಲ್ಲಿ ನಡೆಯಲಿದೆ. ದಿ. 18ರಂದು ಮಾರುತಿ, ಬಲಮುರಿ ವಿಶ್ವೇಶ್ವರ, ನವಗ್ರಹ ಹಾಗೂ ರಾಮ, ಲಕ್ಷ್ಮಣ, ಸೀತಾ ಮೂರ್ತಿಗಳಿಗೆ ಮಹಾರುದ್ರಾಭಿಷೇಕ ಪೂಜೆ ನಡೆಯಲಿದೆ.

ದಿ. 19 ಗುರುವಾರ ಯುಗಾದಿ ಪಾಡ್ಯದಂದು ಸಂಜೆ 5.30ಕ್ಕೆ ಮಹಾಸ್ವಾಮಿಗಳ ದಿವ್ಯಸಾನಿಧ್ಯದಲ್ಲಿ ಮಾರುತಿ ದೇವರ ರಥೋತ್ಸವ ವಿಜೃಂಭಣೆಯಿಂದ ಜರುಗಲಿದೆ. ಮಾ. 20 ಶುಕ್ರವಾರ ಸಂಜೆ 5.30ಕ್ಕೆ ಕಡುಬಿನ ಕಾಳಗ ಕಾರ್ಯಕ್ರಮ ನಡೆಯಲಿದೆ ಎಂದು ಮಾರುತಿ ದೇವಸ್ಥಾನದ ಸಮಿತಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.



ಮಹಿಳಾ ದಿನಾಚರಣೆ ಹಾಗೂ ಶಾಸ್ತ್ರೀಯ ಸಂಗೀತ ಕಾರ್ಯಕ್ರಮಕ್ಕೆ ಚಾಲನೆ ನೀಡಿದ– ಕೆ. ಮಹೇಶ್

# ಮಹಿಳೆಯರ ಪಾತ್ರ ಸಮಾಜದ ಅಭಿವೃದ್ಧಿಗೆ ಅಡಿಪಾಯ!



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ ಸೋಮೇಶ್ವರ ದೇವಸ್ಥಾನದಲ್ಲಿ ಮೈತ್ರಿ–85 ಬಳಗ ಮತ್ತು ರಾಯಚೂರಿನ ಸದಾನಂದ ಕನವಳ್ಳಿ ಆರ್ಟ್ ಫೌಂಡೇಷನ್ ಅವರ ಸಂಯುಕ್ತ ಆಶ್ರಯದಲ್ಲಿ ಮಹಿಳಾ ದಿನಾಚರಣೆ ಹಾಗೂ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ಶನಿವಾರ ವಿಜೃಂಭಣೆಯಿಂದ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಫೌಂಡೇಷನ್ ಕಾರ್ಯದರ್ಶಿ ಕೆ. ಮಹೇಶ್, ಸಮಾಜದ ಸಮಗ್ರ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲಿ ಸಮರ್ಥವಾಗಿ ಕಾರ್ಯನಿರ್ವಹಿಸುವ ಸಾಮರ್ಥ್ಯ ಹೊಂದಿದ್ದಾರೆ. ಅದಕ್ಕಾಗಿ ಭಾರತದಲ್ಲಿ ಮಹಿಳೆಗೆ ಶ್ರೇಷ್ಠ ಸ್ಥಾನ ನೀಡಲಾಗಿದೆ ಎಂದು ಹೇಳಿದರು. ಮಹಿಳೆಯರನ್ನು ಗೌರವಿಸುವ ಮನೋಭಾವ ಬೆಳೆಸಬೇಕು ಎಂದು ಅವರು ತಿಳಿಸಿದರು.

ಹಿರಿಯ ಮುಖಂಡ ಚಂಬಣ್ಣ ಬಾಳಿಕಾಯಿ ಮಾತನಾಡಿ, ಸದಾನಂದ ಕನವಳ್ಳಿ ಅವರು ಲಕ್ಷ್ಮೇಶ್ವರದ ಎಂ.ಎ. ಕಾಲೇಜಿನ ಪ್ರಾಚಾರ್ಯರಾಗಿ ಶೈಕ್ಷಣಿಕ ಕ್ಷೇತ್ರದಲ್ಲಿ ಮಹತ್ವದ ಸೇವೆ ಸಲ್ಲಿಸಿದ್ದಾರೆ ಎಂದು ಸ್ಮರಿಸಿದರು. ಸೋಮೇಶ್ವರ ಭಕ್ತರ ಸೇವಾ ಟ್ರಸ್ಟ್ ಅಧ್ಯಕ್ಷ ಗುರುರಾಜ ಪಾಟೀಲಕುಲಕರ್ಣಿ ಮಾತನಾಡಿ, ಸಂಘ ಸಂಸ್ಥೆಗಳು ಸಮಾಜಮುಖಿ ಕೆಲಸಗಳಿಗೆ ಮುಂದಾಗಬೇಕು ಎಂದರು.

> "ವಿದ್ಯೆಯಿಂದ ಮಾತ್ರ ಬದುಕಿನಲ್ಲಿ ಅಭಿವೃದ್ಧಿ ಸಾಧ್ಯ; ಹೆಣ್ಣುಮಕ್ಕಳಿಗೆ ಶಿಕ್ಷಣ ಅಗತ್ಯ".
> – ಡಾ. ರೇಣುಕಾ ನಾಯಕ

ಗುಲಬರ್ಗಾ ಕೇಂದ್ರೀಯ ವಿಶ್ವವಿದ್ಯಾಲಯದ ಇಂಗ್ಲೀಷ್ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ. ರೇಣುಕಾ ನಾಯಕ ಉಪನ್ಯಾಸ ನೀಡಿ, ಮಹಿಳೆಯರು ಇಂದಿನ ದಿನಗಳಲ್ಲಿ ಎಲ್ಲಾ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸುತ್ತಿದ್ದಾರೆ. ಇದಕ್ಕೆ ಶಿಕ್ಷಣವೇ ಮೂಲ ಕಾರಣ. ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವುದು ಅತ್ಯಗತ್ಯ ಎಂದು ಹೇಳಿದರು.

ಈ ಸಂದರ್ಭದಲ್ಲಿ ಪುರಸಭೆ ಪದವಿ ಮಹಾವಿದ್ಯಾಲಯದ ರಾಜ್ಯಶಾಸ್ತ್ರ ಉಪನ್ಯಾಸಕ ಹಾಗೂ ಕರ್ನಾಟಕ ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ ಪ್ರಾಧ್ಯಾಪಕರ ಸಂಘದ ಅಧ್ಯಕ್ಷ ಎಚ್.ಎನ್. ಕೆರೂರ, ಮೈತ್ರಿ–85 ಬಳಗದ ಅಧ್ಯಕ್ಷ ಸುರೇಶ ಚೋಟಗಲ್, ಕಾರ್ಯದರ್ಶಿ ಮಹಾದೇವ ಪವಾರ ಮಾತನಾಡಿದರು. ಎಸ್.ಎಸ್. ವಡಕಣ್ಣವರ ಸ್ವಾಗತಿಸಿದರು. ಬಿ.ಎಸ್. ಹೆಬ್ಬಾಳ ವಂದಿಸಿದರು. ಬಳಗದ ಸಂಚಾಲಕ ಆರ್.ಕೆ. ಕಮ್ಮಾರ ಕಾರ್ಯಕ್ರಮ ನಿರೂಪಿಸಿದರು.

ನಂತರ ನಡೆದ ಶಾಸ್ತ್ರೀಯ ಸಂಗೀತ ಕಾರ್ಯಕ್ರಮದಲ್ಲಿ ಸರಿತಾ ಮಹೇಶ್ ರಾಗ ಜೋಗ್‌ನೊಂದಿಗೆ ಕಾರ್ಯಕ್ರಮ ಆರಂಭಿಸಿ ವಚನ ಹಾಗೂ ಕನಕದಾಸರ ಕೀರ್ತನೆಗಳನ್ನು ಹಾಡಿದರು. ಬಳಿಕ ವೆಂಕಟೇಶ ಪಾಟೀಲ ರಾಗ ಪೂರಿಯಾ ಕಲ್ಯಾಣಿಯೊಂದಿಗೆ ಸಂಗೀತ ಸೇವೆ ಆರಂಭಿಸಿ ಕೊನೆಯಲ್ಲಿ ಬೈರವಿಯೊಂದಿಗೆ ಕಾರ್ಯಕ್ರಮ ಮುಕ್ತಾಯಗೊಳಿಸಿದರು. ಕೃಷ್ಣಕುಮಾರ ಕುಲಕರ್ಣಿ ತಬಲಾ ಹಾಗೂ ಅರ್ಜುನ ವಠಾರ ಹಾರ್ಮೋನಿಯಂನಲ್ಲಿ ಸಾಥ್ ನೀಡಿದರು.

# ಶಾರದಾ ಪೂಜೆ ಸಂಭ್ರಮ – ಎಂಟನೇ ತರಗತಿ ವಿದ್ಯಾರ್ಥಿಗಳಿಗೆ ಹೃದಯಸ್ಪರ್ಶಿ ಬೀಳ್ಕೊಡುಗೆ



■ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ

ರಾಮನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಾರದಾ ಪೂಜೆ ಹಾಗೂ ಎಂಟನೇ ತರಗತಿಯ ವಿದ್ಯಾರ್ಥಿಗಳಿಗೆ ಹಮ್ಮಿಕೊಳ್ಳಲಾಗಿದ್ದ ಬೀಳ್ಕೊಡುಗೆ ಸಮಾರಂಭವು ಅತ್ಯಂತ ಸಂಭ್ರಮದಿಂದ ನಡೆಯಿತು.

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಪುರಸಭೆಯ ಅಧ್ಯಕ್ಷರಾದ ಮರಿ ರಾಮಪ್ಪ ಅವರು, ಇಂದಿನ ಮಕ್ಕಳು ನಾಳೆಯ ದೇಶದ ಪ್ರಜೆಗಳು ಎಂದು ಹೇಳಿ, ಜೀವನದಲ್ಲಿ ಶಿಸ್ತು ಮತ್ತು ಪರಿಶ್ರಮವನ್ನು ಮೈಗೂಡಿಸಿಕೊಳ್ಳಬೇಕು ಎಂದರು. ಉತ್ತಮವಾಗಿ ವಿದ್ಯಾಭ್ಯಾಸ ಮಾಡುವ ಮೂಲಕ ತಾವು ಕಲಿತ ಶಾಲೆಗೆ, ತಂದೆ–ತಾಯಿಗಳಿಗೆ ಹಾಗೂ ಗುರುಗಳಿಗೆ ಕೀರ್ತಿ ತರಬೇಕು ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಆರ್‌ಎಸ್‌ಎಸ್‌ಎನ್ ಬ್ಯಾಂಕಿನ ಅಧ್ಯಕ್ಷರಾದ ದಾನಮ್ಮನವರ ಬಸವರಾಜ್ ಅವರು, ಪ್ರಾಥಮಿಕ ಶಿಕ್ಷಣವು ಜೀವನದ ಭದ್ರ ಬುನಾದಿಯಾಗಿದ್ದು, ಮುಂದಿನ ಹಂತಗಳಲ್ಲಿ ವಿದ್ಯಾರ್ಥಿಗಳು ತಮ್ಮ ಪ್ರತಿಭೆಯನ್ನು ತೋರಿಸಬೇಕು ಎಂದು ಹೇಳಿದರು.

ಶಾಲಾ ಆವರಣದಲ್ಲಿ ನಡೆದ ಶಾರದಾ ಪೂಜೆಯಲ್ಲಿ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಭಕ್ತಿಯಿಂದ ಪಾಲ್ಗೊಂಡು ಪೂಜೆಯನ್ನು ನೆರವೇರಿಸಿದರು.

ಈ ಕಾರ್ಯಕ್ರಮದಲ್ಲಿ ಜಿಲ್ಲಾ ಮಾನವ ಹಕ್ಕುಗಳ ಹಾಗೂ ಸಾಮಾಜಿಕ ನ್ಯಾಯ ಆಯೋಗದ ಕಾರ್ಯಾಧ್ಯಕ್ಷರಾದ ಕೆ. ಶಹಬುದ್ದೀನ್, ಎಸ್‌ಡಿಎಂಸಿ ಅಧ್ಯಕ್ಷರಾದ ಗಂಗಮ್ಮ ಶಿವಣ್ಣ, ಉಪಾಧ್ಯಕ್ಷರಾದ ತಳವಾರ ರಾಘವೇಂದ್ರ ಸೇರಿದಂತೆ ಶಿಕ್ಷಕ ವೃಂದದ ರಾಮಪ್ಪ (ರಾಮು), ಮುರುಘ ರಾಜೇಂದ್ರ, ಟಿ. ಮುಗಪ್ಪ, ಆರ್.ಎಸ್. ಕಂದಗಲ್, ದೇವಿರಮ್ಮ, ಸವಿತಾ, ಗೀತಾ, ಅಪ್ಸನಾ, ವಾಣಿ, ಕವಿತಾ, ಸರಸ್ವತಿ, ಸೋನಿಯಾ ಬಾಯಿ ಹಾಗೂ ಎಸ್‌ಡಿಎಂಸಿ ಸದಸ್ಯರು ಮತ್ತು ವಿದ್ಯಾರ್ಥಿಗಳು ಹಾಜರಿದ್ದು, ಎಂಟನೇ ತರಗತಿ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

# ಮನಸ್ಸು ಮಾಡಿದರೆ ಜೀವನದಲ್ಲಿ ಏನನ್ನಾದರೂ ಸಾಧಿಸಬಹುದು

■ವಿಜಯಸಾಕ್ಷಿ ಸುದ್ದಿ, ಗದಗ

ಹೆಣ್ಣು ಮನಸ್ಸು ಮಾಡಿದರೆ ಜೀವನದಲ್ಲಿ ಏನನ್ನಾದರೂ ಸಾಧಿಸಬಹುದು. ಮಕ್ಕಳೊಡನೆ ಬೆರೆತು ಮೊಬೈಲ್, ಕಂಪ್ಯೂಟರ್‌ಗಳ ದುರುಪಯೋಗ ತಡೆಯಬೇಕು ಎಂದು ವೀಣಾ ಅಠವಳೆ ತಿಳಿಸಿದರು.

ಗದಗ–ಬೆಟಗೇರಿಯ ಇನ್ನರ್ ವ್ಹೀಲ್ ಕ್ಲಬ್ ಗದಗ–ಬೆಟಗೇರಿ ಸಂಸ್ಥೆಯಲ್ಲಿ ಆಯೋಜಿಸಿದ್ದ ಮಹಿಳಾ ದಿನಾಚರಣೆ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ ಅವರು, ಮಹಿಳೆಯರು ಮಾನಸಿಕ ಹಾಗೂ ದೈಹಿಕವಾಗಿ ಸಶಕ್ತವಾಗಿರಬೇಕು. ಸ್ವಾವಲಂಬನೆಯ ಜೀವನ ನಡೆಸಲು ಮಹಿಳೆಯರು ಪ್ರತಿದಿನ ಪ್ರಯತ್ನಿಸಬೇಕು" ಎಂದರು.

ಡಾ. ಅನ್ನಪೂರ್ಣಾ ಧನ್ನೂರ ಮಾತನಾಡಿ, "ಮಹಿಳೆಯರು ದಿನಕ್ಕೆ 40 ನಿಮಿಷ ವ್ಯಾಯಾಮ, ಪೌಷ್ಟಿಕ ಆಹಾರದೊಂದಿಗೆ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು. ಆರೋಗ್ಯವಾಗಿದ್ದಾಗ ಮಾತ್ರ ಮನೆಯಲ್ಲಿ ಸುಖ–ಸಂತೋಷ ನೆಲೆಸುತ್ತದೆ. 40 ವಯಸ್ಸಿನ ನಂತರ ಎದುರಿಸಬಹುದಾದ ಸಮಸ್ಯೆಗಳ ಕುರಿತು ಮುಂಚಿತ ಜಾಗೃತಿ ಅಗತ್ಯ" ಎಂದು ಹೇಳಿದರು..

ಇನ್ನರ್ ವ್ಹೀಲ್ ಕ್ಲಬ್ ಗದಗ–ಬೆಟಗೇರಿಯ ಪಿ ಡಿ ಸಿ ಪ್ರೇಮಾ ಗುಳಗೌಡರ್ ಮಹಿಳಾ ಸಂಸ್ಥೆಯ ಸಾಧನೆಗಳು, ಮಹಿಳಾ ದಿನಾಚರಣೆಯ ಮಹತ್ವ ಕುರಿತು ಮಾತನಾಡಿದರು. ಇದೇ ವೇಳೆ ವಿಭಿನ್ನ ಕ್ಷೇತ್ರಗಳಲ್ಲಿ ಸಾಧನೆಗೈದ 9 ಮಹಿಳೆಯರನ್ನೂ ಸನ್ಮಾನಿಸಲಾಯಿತು:

ಮಾರ್ಚ್ ತಿಂಗಳಲ್ಲಿ ಆಚರಿಸುವ ರಂಗಪಂಚಮಿ ರಂಗಿನಾಟ, ಯುಗಾದಿ ಸಂಭ್ರಮ, ಹಿರಿಯರ ಆಶೀರ್ವಾದ ಹಾಗೂ ಸ್ನೇಹಿತೆಯರ ಸಹಕಾರದೊಂದಿಗೆ ಶ್ರೇಷ್ಠ ಮಹಿಳೆಯರನ್ನು ನೆನೆದು ಕೇಕ್ ಕತ್ತರಿಸಿ ಸಿಹಿ ಹಂಚಲಾಯಿತು.

ಕಾರ್ಯಕ್ರಮದಲ್ಲಿ ಸಾಧಕರು ಮತ್ತು ಅವರ ಕುಟುಂಬಸ್ಥರು, ಕ್ಲಬ್ ಮಾಜಿ ಅಧ್ಯಕ್ಷರು, ಹಿರಿಯರು, ಆಡಳಿತ ಮಂಡಳಿಯವರು ಮತ್ತು ಸರ್ವ ಸದಸ್ಯರು ಉಪಸ್ಥಿತರಿದ್ದರು.




ಸಾಹಿತ್ಯ ಸೇವೆ, ಆಡಳಿತ ಅನುಭವ ಹೊಂದಿರುವ ಅಭ್ಯರ್ಥಿಗೆ ಮತದಾರರ ಬೆಂಬಲ ಅಗತ್ಯ–ನಬಿಸಾಬ

# ಕಸಾಪ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಡಾ. ಸಿ. ಸೋಮಶೇಖರರಿಗೆ ಬೆಂಬಲ ನೀಡಿ



> "ಸಾಹಿತ್ಯ ಸೇವೆ ಮತ್ತು ಆಡಳಿತ ಅನುಭವ ಹೊಂದಿರುವ ಡಾ. ಸೋಮಶೇಖರರು ಕಸಾಪಕ್ಕೆ ಸೂಕ್ತ ನಾಯಕರು".
> – ನಬಿಸಾಬ ಕುಷ್ಟಗಿ

■ವಿಜಯಸಾಕ್ಷಿ ಸುದ್ದಿ, ರೋಣ

ಮುಂದಿನ ಕೆಲ ತಿಂಗಳಲ್ಲಿ ನಡೆಯಲಿರುವ ಕನ್ನಡ ಸಾಹಿತ್ಯ ಪರಿಷತ್ (ಕಸಾಪ) ರಾಜ್ಯಾಧ್ಯಕ್ಷ ಸ್ಥಾನದ ಚುನಾವಣೆಯಲ್ಲಿ ನಿವೃತ್ತ ಐಎಎಸ್ ಅಧಿಕಾರಿ ಹಾಗೂ ಸಾಹಿತಿ ಡಾ. ಸಿ. ಸೋಮಶೇಖರ ಅವರನ್ನು ಬೆಂಬಲಿಸಬೇಕು ಎಂದು ನಿಕಟಪೂರ್ವ ಕೇಂದ್ರ ಸಂಘ ಸಂಸ್ಥೆ ಪ್ರತಿನಿಧಿ ಹಾಗೂ ಕಸಾಪ ಸದಸ್ಯರಾದ ನಬಿಸಾಬ ಕುಷ್ಟಗಿ ಮನವಿ ಮಾಡಿದ್ದಾರೆ.

ಪಟ್ಟಣದ ಪಿಡಬ್ಲ್ಯುಡಿ ಪ್ರವಾಸಿ ಮಂದಿರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, "ಡಾ. ಸೋಮಶೇಖರ ಅವರು ಐಎಎಸ್ ಅಧಿಕಾರಿಯಾಗಿ ಉತ್ತಮ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಅವರ ಸಾಹಿತ್ಯ ಸೇವೆ ಮತ್ತು ಕನ್ನಡಾಭಿಮಾನಿ ಚಟುವಟಿಕೆಗಳು ರಾಜ್ಯದ ಸಾಹಿತ್ಯ ವಲಯದಲ್ಲಿ ಹೆಸರಾಗಿವೆ. ಈ ಹಿನ್ನೆಲೆಯಲ್ಲಿ ಕಸಾಪ ಮತದಾರರು ಅವರನ್ನು ಬೆಂಬಲಿಸಬೇಕು" ಎಂದರು. ಡಾ. ಸೋಮಶೇಖರ ಅವರು ತಮ್ಮ ವೃತ್ತಿಜೀವನವನ್ನು ಅಧ್ಯಾಪಕರಾಗಿ ಆರಂಭಿಸಿ, ನಂತರ ಐಎಎಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ವಿವಿಧ ಉನ್ನತ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ, ಕನ್ನಡ ಸಂಸ್ಕೃತಿ ಇಲಾಖೆಯ ನಿರ್ದೇಶಕ, ತುಮಕೂರು ಜಿಲ್ಲಾಧಿಕಾರಿ ಸೇರಿದಂತೆ ಹಲವು ಪ್ರಮುಖ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿ ತಮ್ಮ ಆಡಳಿತ ಸಾಮರ್ಥ್ಯವನ್ನು ತೋರಿಸಿದ್ದಾರೆ.

ಸಾಹಿತ್ಯ ಕ್ಷೇತ್ರದಲ್ಲಿಯೂ ಅವರು ಮುತ್ತಿನಹಾರ ಸೇರಿದಂತೆ ಅನೇಕ ಕೃತಿಗಳನ್ನು ರಚಿಸಿದ್ದು, ಚಿಂತನ ಚಿಲುಮೆ, ಚಿಂತಣ ಕಿರಣ, ಚಿಂತಣ ಚೇತನ, ಅರಿವೇ ಗುರು, ಮಾತೆಂಬುದು ಜ್ಯೋತಿರ್ಲಿಂಗ ಮುಂತಾದ ಚಿಂತನಾ ಕೃತಿಗಳ ಮೂಲಕ ಕನ್ನಡ ಸಾಹಿತ್ಯಕ್ಕೆ ಕೊಡುಗೆ ನೀಡಿದ್ದಾರೆ. ಅಲ್ಲದೇ ಹಲವು ಕನ್ನಡ ಸಾಹಿತ್ಯ ಸಮ್ಮೇಳನಗಳಿಗೆ ಅಧ್ಯಕ್ಷತೆ ವಹಿಸಿ ಯಶಸ್ವಿಯಾಗಿ ಕಾರ್ಯಕ್ರಮಗಳನ್ನು ನಡೆಸಿದ್ದಾರೆ.

ಈ ಹಿನ್ನೆಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಸಾಪ ಸದಸ್ಯರು ಡಾ. ಸಿ. ಸೋಮಶೇಖರರನ್ನು ಬೆಂಬಲಿಸಬೇಕು ಎಂದು ನಬಿಸಾಬ ಕುಷ್ಟಗಿ ಮನವಿ ಮಾಡಿದರು.

ಧಾರವಾಡ ಜಿಲ್ಲೆಯಲ್ಲಿ ಸಾವಿರಾರು ಪ್ರಕರಣಗಳಿಗೆ ತ್ವರಿತ ಪರಿಹಾರ

# ರಾಷ್ಟ್ರೀಯ ಲೋಕ ಅದಾಲತ್ ಫಲಶ್ರುತಿ



■ವಿಜಯಸಾಕ್ಷಿ ಸುದ್ದಿ, ಧಾರವಾಡ

ರಾಷ್ಟ್ರೀಯ ಲೋಕ ಅದಾಲತ್ ಅಂಗವಾಗಿ ಧಾರವಾಡ ಜಿಲ್ಲೆಯ ಎಲ್ಲಾ ನ್ಯಾಯಾಲಯಗಳಲ್ಲಿ ನಡೆದ ನ್ಯಾಯಮೇಳಕ್ಕೆ ಉತ್ತಮ ಸ್ಪಂದನೆ ವ್ಯಕ್ತವಾಗಿದ್ದು, ಸಾವಿರಾರು ಪ್ರಕರಣಗಳು ಸಮಾಧಾನಾತ್ಮಕವಾಗಿ ಇತ್ಯರ್ಥಗೊಂಡಿವೆ.

ಜಿಲ್ಲೆಯ ನ್ಯಾಯಾಲಯಗಳಲ್ಲಿ ಬಾಕಿ ಇದ್ದ 55,410 ಪ್ರಕರಣಗಳಲ್ಲಿ 4,567 ಪ್ರಕರಣಗಳು ಲೋಕ ಅದಾಲತ್ ಮೂಲಕ ಇತ್ಯರ್ಥಗೊಂಡಿವೆ. ಇದರ ಜೊತೆಗೆ 41,156 ವ್ಯಾಜ್ಯ ಪೂರ್ವ ಪ್ರಕರಣಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಗಿದ್ದು, ಅವುಗಳಲ್ಲಿ 38,529 ಪ್ರಕರಣಗಳು ರಾಜೀ ಸಂಧಾನದ ಮೂಲಕ ಪರಿಹಾರ ಕಂಡುಕೊಂಡಿವೆ.

ವ್ಯಾಜ್ಯ ಪೂರ್ವ ಪ್ರಕರಣಗಳ ಮೂಲಕ 86,07,705 ಮೊತ್ತದ ಪರಿಹಾರ ಲಭಿಸಿದ್ದು, ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದ್ದ ಪ್ರಕರಣಗಳಲ್ಲಿ 48,16,98,630 ಮೊತ್ತಕ್ಕೆ ಇತ್ಯರ್ಥ ಕಂಡಿದೆ.

ಲೋಕ ಅದಾಲತ್‌ನಲ್ಲಿ ವೈವಾಹಿಕ ಹಾಗೂ ಜೀವನಾಂಶ ಸಂಬಂಧಿತ ಪ್ರಕರಣಗಳಲ್ಲೂ ಗಮನಾರ್ಹ ಫಲಿತಾಂಶ ಕಂಡುಬಂದಿದೆ. 15 ಪ್ರಕರಣಗಳಲ್ಲಿ ದಂಪತಿಗಳು ರಾಜೀ ಸಂಧಾನದ ಮೂಲಕ ಮತ್ತೆ ಒಂದಾಗಿದ್ದು, 73 ಪ್ರಕರಣಗಳಲ್ಲಿ ಹಿರಿಯ ನಾಗರಿಕರು ತಮ್ಮ ವಿವಾದಗಳನ್ನು ಶಾಂತಿಯುತವಾಗಿ ಬಗೆಹರಿಸಿಕೊಂಡಿದ್ದಾರೆ.

ಪ್ರಕರಣಗಳ ಇತ್ಯರ್ಥಕ್ಕೆ ಮಾರ್ಗದರ್ಶನ ನೀಡಿದ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಬಿ.ಎಸ್. ಭಾರತಿ ಸೇರಿದಂತೆ ಜಿಲ್ಲೆಯ ಎಲ್ಲಾ ನ್ಯಾಯಾಧೀಶರು, ನ್ಯಾಯವಾದಿಗಳು, ಬ್ಯಾಂಕ್‌ಗಳು, ಸಹಕಾರಿ ಸಂಘಗಳು, ಹಣಕಾಸು ಸಂಸ್ಥೆಗಳು, ವಿಮಾ ಕಂಪನಿಗಳು, ಅಭಿಯೋಜನಾ ಅಧಿಕಾರಿಗಳು, ಪೊಲೀಸ್ ಇಲಾಖೆ ಹಾಗೂ ಕಕ್ಷಿದಾರರನ್ನು ಧಾರವಾಡ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಅಭಿನಂದಿಸಿದೆ.

# ಅಕ್ರಮ ಮರಳು ಸಾಗಾಟ: ಟ್ರ್ಯಾಕ್ಟರ್ ವಶ, ಚಾಲಕ ಪರಾರಿ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಅನಧಿಕೃತವಾಗಿ ಮರಳು ಸಾಗಿಸುತ್ತಿದ್ದ ಟ್ರ್ಯಾಕ್ಟರ್‌ನ್ನು ಲಕ್ಷ್ಮೇಶ್ವರ ಪೊಲೀಸ್ ಠಾಣೆಯ ಪೊಲೀಸರು ವಶಪಡಿಸಿಕೊಂಡು ಪ್ರಕರಣ ದಾಖಲಿಸಿದ್ದಾರೆ.

ತಾಲೂಕಿನ ಹರದಗಟ್ಟಿ ಗ್ರಾಮದ ರಸ್ತೆಯ ಅಗಸ್ತ್ಯ ತೀರ್ಥದ ಬಳಿ ಭಾನುವಾರ ರಾತ್ರಿ ಈ ಘಟನೆ ನಡೆದಿದೆ. ಯಾವುದೇ ಪಾಸ್ ಅಥವಾ ಪರವಾನಗಿ ಇಲ್ಲದೇ ಮರಳನ್ನು ಕಳ್ಳತನದಿಂದ ಸಾಗಿಸುತ್ತಿದ್ದ ವೇಳೆ ಪಿಎಸ್‌ಐ ನಾಗರಾಜ ಗಡದ ಹಾಗೂ ಅವರ ಪೊಲೀಸ್ ತಂಡ ಟ್ರ್ಯಾಕ್ಟರ್‌ನ್ನು ತಡೆದರು.

ಈ ವೇಳೆ ಚಾಲಕ ಟ್ರ್ಯಾಕ್ಟರ್‌ನ್ನು ಬಿಟ್ಟು ಪರಾರಿಯಾಗಿದ್ದಾನೆ. ಸ್ಥಳದಲ್ಲೇ ಟ್ರ್ಯಾಕ್ಟರ್ ಹಾಗೂ ಟ್ರೇಲರ್‌ನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ.

ಚಾಲಕ ಮತ್ತು ಮರಳು ಅಕ್ರಮ ಸಾಗಾಟಕ್ಕೆ ಸಹಕರಿಸಿದ ಟ್ರ್ಯಾಕ್ಟರ್ ಮಾಲೀಕನ ವಿರುದ್ಧ ಲಕ್ಷ್ಮೇಶ್ವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪೌರಾಡಳಿತ ಇಲಾಖೆ

**ಪಟ್ಟಣ ಪಂಚಾಯತ ಕಾರ್ಯಾಲಯ ಮುಳಗುಂದ – 582117**
(ಜಿಲ್ಲೆ: ಗದಗ, ರಾಜ್ಯ: ಕರ್ನಾಟಕ)

ಸಂ:ಪಪಂಮು/ತಾಂ.ವಿ./ಯು.ಆಯ್.ಡಿ.ಎಸ್.ಎಸ್.ಎಂ.ಟಿ./ಟೆಂಡರ್/ವಹಿ–/2025–26
ದಿನಾಂಕ:–13–03–2026

**ಅಲ್ಪಾವಧಿ ಟೆಂಡರ್ ಪ್ರಕಟಣೆ**
**ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಮೂಲಕ**

ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯತ ಮುಳಗುಂದ ಇವರಿಂದ ಮುಳಗುಂದ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ–2000ರ ಪ್ರಕಾರ **"ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್"** ಪದ್ಧತಿಯಲ್ಲಿ 10ನೇ ಹಣಕಾಸು, 12ನೇ ಹಣಕಾಸು ಯು.ಆಯ್.ಡಿ.ಎಸ್.ಎಸ್.ಎಂ.ಟಿ. ಹಾಗೂ ಎಸ್.ಎಫ್.ಸಿ. ಅನುದಾನದಡಿ ನಿರ್ಮಿಸಿದ ವಾಣಿಜ್ಯ ಮಳಿಗೆಗಳ ಮಾಸಿಕ ಬಾಡಿಗೆ ಮೊತ್ತದ ಅನುದಾನದಡಿ **ಇಂಡೆಂಟ್ ನಂಬರ್‌ಗಳ ಸಂಖ್ಯೆಗಳು**–DMA/2025-26/BD/WORK_INDENT42311ನೇದ್ದರ **ವಿವಿಧ ಭಾಗಗಳಲ್ಲಿರುವ ಮಳಿಗೆಗಳ ರಿಪೇರಿ** ಕಾಮಗಾರಿಗಳ ನಿರ್ವಹಣೆಗಾಗಿ ಕೆ.ಡಬ್ಲ್ಯೂ.1/2/3 ದಸ್ತಾವೇಜನಲ್ಲಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಮತ್ತು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಚಾಲ್ತಿ ಸಾಲಿನ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ ದಾಖಲೆಗಳಿಗಾಗಿ **http://kppp.karnataka.gov.in** ರ ಮೂಲಕ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್‌ಲೈನ್ ಮೂಲಕವೇ ಟೆಂಡರ್ ಸಲ್ಲಿಸುವುದು.

1) ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 23–03–2026 ಸಂಜೆ:4.00 ಗಂಟೆಗೆ**
2) ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಬಿಡ್ ತೆರೆಯುವ **ದಿನಾಂಕ: 24–03–2026 ಸಂಜೆ:4:30 ಗಂಟೆಗೆ**

ನಿಗದಿ ಪಡಿಸಿದ ದಿನಾಂಕಗಳು ಒಂದು ವೇಳೆ ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನಾಂಕವನ್ನು ಪರಿಗಣಿಸಲಾಗುವುದು. ಯಾವುದೇ ತಿದ್ದುಪಡಿಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ.

ಈ ಕಚೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲಾ ಕಾಮಗಾರಿ ಇ.ಎಂ.ಡಿ. ಪೂರ್ಣಗೊಳಿಸುವ ಅವಧಿ, ಗುತ್ತಿಗೆದಾರರ ದರ್ಜೆ ಹಾಗೂ ಇನ್ನಿತರ ಹೆಚ್ಚಿನ ಮಾಹಿತಿ ಹಾಗೂ ಷರತ್ತುಗಳಿಗೆ ಕಚೇರಿಯ ವೆಬ್‌ಸೈಟ್ **http://www.mulagundatown.mrc.gov.in** ಹಾಗೂ ಕಚೇರಿ ವೇಳೆಯಲ್ಲಿ ಸಂಬಂಧಿಸಿದ ಶಾಖೆಯಲ್ಲಿ ಮಾಹಿತಿಯನ್ನು ಪಡೆಯಬಹುದು. ಇ–ಪೋರ್ಟಲ್‌ನ ಎಲ್ಲ ಷರತ್ತುಗಳು ಅನ್ವಯಿಸುತ್ತವೆ. ಹಾಗೂ ಟೆಂಡರ್ ಮಂಜೂರ ವ ನಾಮಂಜೂರ ಮಾಡುವ ಅಧಿಕಾರವನ್ನು ಪಟ್ಟಣ ಪಂಚಾಯತ ಕಾಯ್ದಿರಿಸಿಕೊಂಡಿದೆ.

| | |
|---|---|
| ಸಹಿ/– | ಸಹಿ/– |
| (ಶ್ರೀ.ಮಂಜುನಾಥ ಪಿ ಗುಳೇದ) | (ಶ್ರೀನಿವಾಸಮೂರ್ತಿ ಕುಲಕರ್ಣಿ) |
| ಮುಖ್ಯಾಧಿಕಾರಿ | ಆಡಳಿತಾಧಿಕಾರಿಗಳು |
| ಪಟ್ಟಣ ಪಂಚಾಯತ ಮುಳಗುಂದ | ಪಟ್ಟಣ ಪಂಚಾಯತ ಮುಳಗುಂದ |
| | ತಹಶೀಲ್ದಾರ ಹಾಗೂ ತಾಲೂಕಾ |
| ವಾ.ಸಾ.ಇ/ಗದಗ/707/ದೇಶಪಾಂಡೆಪಬ್ಲಿಸಿಟಿ/2025–26 | ದಂಡಾಧಿಕಾರಿಗಳು ಗದಗ |

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka